ಕೊರವಂಜಿ



KURAVANJI
Kannada Monthly

ಸಂಪಾದಕರು :

ಶ್ರೀ|| ರಾ. ಶಿ.

ಬರಹಗಾರರು :

ಶ್ರೀ|| ಅ. ರಾ. ಸೆ.
ಶ್ರೀಮತಿ ಟಿ. ಸುನಂದಮ್ಮ
ಶ್ರೀ|| ನಾರಾಯಣ
ಶ್ರೀ|| ಜುಟ್ಟೆ
ಶ್ರೀ|| ಪ್ರಸಾದ್
ಶ್ರೀ|| ಕೆ. ಎಸ್. ಕಟ್ಟೀನ್
ಶ್ರೀ|| ಹೆಚ್. ಎಸ್. ರಾವ್
ಶ್ರೀ|| ಕಾಮತ್
ಶ್ರೀಮತಿ|| ಪಾರ್ವತಿ
ಇತ್ಯಾದಿ ಇತ್ಯಾದಿ

ಸೆಪ್ಟೆಂಬರ್
೧೯೬೫

೨೫ ಪೈ.

ತಿಳಿನಗೆಯ ಮಾಸಪತ್ರಿಕೆ


For 3 way Beauty Treatment....
RAJA
SNOW
AMLA HAIR OIL , KASTURI SOAP
MANYAM & CO. BANGALORE MADRAS MADURAI BOMBAY.

ಕೊರವಂಜಿ

A. ANANTHIAH.

ಸಂಪುಟ ೨೪] ಸೆಪ್ಟೆಂಬರ್ ೧೯೬೫ [ಸಂಚಿಕೆ ೬

ಕುಹಕಿಡಿಗಳು

ಲಾಲ್ ಬಹದ್ದೂರ್ ಶಾಸ್ತ್ರಿಗಳು ಬೌಲ್ ಮಾಡಿ ಟಿ. ಟಿ. ಕೆ. ಅವರನ್ನು ಲಟ್ಟಂತ ಔಟ್ ಮಾಡಿದರಂತೆ.

* * * *

ಮೊನ್ನೆ ನಡೆದ ಚಿತ್ರಗಳ ಪ್ರದರ್ಶನದಲ್ಲಿ ಯಾವುದಾದರೂ ಚೆನ್ನಾಗಿತ್ತೇನಯ್ಯ ಎಂದು ಯುವಕನನ್ನು ಚಿತ್ರಗಾರ ಕೇಳಿದಾಗ. ಅವ

—ಇತ್ತು. ಆದರೆ ಅಮ್ಮನ ಜತೇಗೆ ಅಂಟಿಕೊಂಡೇ ನಡೀತಿತ್ತು ಅನ್ನೋದೆ!

* * * *

ವಿನೋದಸೌಧದಲ್ಲಿ 'ಮಸಿ' ಬಳಸುವಿಕೆಯನ್ನು ಖೋತಾ ಮಾಡಿದ್ದಾರಂತೆ

—ಒಬ್ಬರ ಮುಖಕ್ಕೆ ಒಬ್ಬರು 'ಮಸಿ' ಬಳಿಯುವುದು ಕಡಿಮೆಯಾಗ ಬಹುದು !!

* * * *

ಸಂಗೀತ ವಿದುಷಿ ಹಾಡಿದಾಗ ಕೋಕಿಲ ಕಂಠವನ್ನು ಕೇಳಿ ಕೋಗಿಲೆಗಳು ಪ್ರಾರ್ಥನೆ ಕೊಟ್ಟುವಂತೆ.

—ನಮ್ಮ ರೇಡಿಯೋ ತಿರುಗಿಸಿದಾಗ ಹೆಬ್ಬಾವು ಬಂದು ಅಮರಿಕೊಂಡಿತು.

* * * *

19 ರಿಂದ 26 ಪ್ರಾಯದವರು ಮದುವೆಯಾಗಿಲ್ಲದೆ ಇದ್ದರೆ ಸೈನ್ಯಕ್ಕೆ ಕಡ್ಡಾಯವಾಗಿ ಸೇರಿಸಲಾಗುತ್ತೆ ಎಂದು ಅಮೆರಿಕಾದ ಅಧ್ಯಕ್ಷರು ಘೋಷಿಸಿದಾಗ ಬಹಳ ಜನರು ಅವಸರದಲ್ಲಿ ಮದುವೆಯಾದರಂತೆ.

—ಈಗ ವಿರಾಮವಾಗಿ ಮನೆಯಲ್ಲಿ ಕದನವನ್ನು ಆರಂಭಿಸಿದ್ದಾರಂತೆ.

ಕತ್ತೆಯ ಹಾಲು ಮನುಷ್ಯರ ಸೇವನೆಗೆ ಯೋಗ್ಯವಂತೆ.

—ಮನುಷ್ಯರ ಹಾಲನ್ನು ಲಾಗಾಯ್ತಿನಿಂದ ಕತ್ತೆಗಳಿಗೆ ಕುಡಿಸುತ್ತಲೇ ಇದ್ದಾರೆ!

* * * *

ಸಚಿವರ ಆಶ್ವಾಸನೆಗಳನ್ನು ಕೇಳಿದರೆ, ಮುಂದೆ ಸಣ್ಣ ಕಾರಿನಲ್ಲಿ ಕುಳಿತು ದೊಡ್ಡ ರಸ್ತೆಯಲ್ಲಿ ಆರಾಮಾಗಿ ಹೋಗಿ ಹೋಟಲಲ್ಲಿ ೫೦ ಪೈಸೆ ಕೊಟ್ಟು ಹಬ್ಬದ ಊಟ ಮಾಡಬಹುದು ಅನ್ನಿಸುತ್ತೆ.

—ಆದರೆ ಸಧ್ಯಕ್ಕೆ ಬೈಸಿಕಲ್ ತೆರಿಗೆ ಕೊಡುಕ್ಕೆ ಕ್ಯೂ ನಿಲ್ಲಬೇಕು !

* * * *

ವಿಯಟ್‌ನಾಂನ ಹೊಚಿಮಿನ್ ಅವರು ಪಾಕೀಸ್ಥಾನಕ್ಕೆ ಸಮರ ಸಲಹೆಗಳನ್ನು ಕೊಡುತ್ತಿದ್ದಾರೆಂದು ವದಂತಿ.

—ಇದನ್ನು ಖಂಡಿತಪಡಿಸಿದರೆ ಅಮೆರಿಕನ್ನರು ನಮ್ಮ ಪರವಾಗಿ ಕಾಶ್ಮೀರದಲ್ಲಿ ಹೋರಾಡಬಹುದು !

* * * *

ರೆ॥ ಮೈಕೇಲ್ ಸ್ಕಾಟ್ ಅವರು ಹಿಂತಿರುಗುವ ತನಕ ನಾಗಾ ದೇಶದಲ್ಲಿ ಶಾಂತಿ ಇರುತ್ತದೆ—(ಪತ್ರಿಕೆ)

— ಹೀಗೆ ಅಪಾರ್ಥ ಬರೋಹಾಗೆ ಹೇಳಬಾರದು.

* * * *

ಬೆಂಕಿಯಿಲ್ಲದೆ ಇದ್ದರೆ ಹೊಗೆ ಬರುವುದಿಲ್ಲ—ಗಾದೆ

ಒಲೆಯಲ್ಲಿ ಹಾಗಾಗಬಹುದು, ಆದರೆ ರಾಜಕೀಯದಲ್ಲಲ್ಲ.

* * * *

ಹಬ್ಬಕ್ಕೆ ಮೊದಲು ಆಹಾರ ಬೆಲೆಗಳನ್ನು ಕೇಳಿದ ಮೇಲೆ

— ಮಣ್ಣಿನ ಗಣಪನಿಗೆ ನುಣ್ಣನೆ ನೈವೇದ್ಯ ಅನ್ನಿಸುತ್ತೆ.

* * * *

ಪಾಪುಅ ದೇಶದಲ್ಲಿ ಅಳಿಯ ಒಬ್ಬ ಅತ್ತೆಯನ್ನೇ ಮದುವೆಯಾದನಂತೆ

ಈಗ ಅವನ ಮೊದಲ ಹೆಂಡತಿ "ತಾಯಿಗ್ಗಂಡ" ಅಂತ ಅವನನ್ನು ಬಯ್ಯುತ್ತಾ ಇದ್ದಾಳಂತೆ.

* * * *

ಮೊನ್ನೆ ಪಾರ್ಲಿಮೆಂಟಿನಲ್ಲಿ ದಾಂಡೇಕರ್ ಮಸಾನಿ ಅವರ ಭಾಷಣಗಳನ್ನು ಟಿ. ಟಿ. ಕೆ. ಯವರು ಹರಿದು ಚೂರು ಮಾಡಿದರಂತೆ.

—ಓಟುಗಳ ಬಲ ಇದ್ದರೆ. ಸತ್ಯಾಂಶಗಳನ್ನು ಸುಖವಾಗಿ ಹರಿಯಬಹುದು.

* * * *

ಧನ್ಯವಾದ

ರಾ. ಶಿ.

★

ಮಾನ್ಯ ಮಿತ್ರ ಶ್ರೀ ಗುಪ್ತ,

೨೫ ವರ್ಷಗಳ ಹಿಂದಿನ ಮಾತು. ಮನಸ್ಸಿನಲ್ಲಿ ಕೊಂಕು ನುಡಿದು ಕೊರವಂಜಿಯು ರೂಪುಗೊಳ್ಳುತ್ತಿದ್ದಳು. ಬಹಳ ಬೇನೆ ಕೊಡುತ್ತಿದ್ದಳು. ಸರಸನುಡಿಗಳೊಡೆಯ ಶ್ರೀ ನಾ. ಕಸ್ತೂರಿಯವರಲ್ಲಿ ಹೋಗಿ ಬೇನೆಯ ವಿಷಯ ಹೇಳಿಕೊಂಡೆ. "ಇಂತಹ ಬೇನೆ ಒಳಗಿದ್ದಷ್ಟೂ ತ್ರಾಸು. ಹೊರಗೆ ತಂದರೆ ಒಳ್ಳೆಯದು, ಬೆನ್‌ಬಲವಾಗಿ ನಾನಿರುತ್ತೇನೆ" ಎಂದವರು ಅಂದರು. ಆಗ ನಿಮ್ಮಲ್ಲಿಗೆ ಬಂದು ವಿಷಯ ಮಾತನಾಡಿದೆ. "ಪ್ರಕಾಶಕನ ಜವಾಬ್ದಾರಿಯನ್ನು ಹೊರುತ್ತೇನೆ, ಸಂಪಾದಕೀಯ ಸೂತಕ ನಿಮಗೆ ಅಂಟಿದ್ದು" ಎಂದು ನುಡಿದಿರಿ. ಹ್ಞೂ ಎಂದು ನಾನು ಅಂದಾಗ ನುಡಿದಂತೆ ನಡೆದುಕೊಂಡಿರಿ.

ನಿಮ್ಮ ಪತ್ರಿಕಾ ಬಾಳಿನಲ್ಲಿ, ಪರ್ವಕಾಲ ಬಂತು. ವಿಶಾಲ ಕ್ಷೇತ್ರದ ದುಡಿಮೆಗೆ ಪತ್ರಿಕೋದ್ಯಮವು ದಾರಿ ಬಿಟ್ಟುಕೊಟ್ಟಿತು. ಆಗ ಕೆಲವು ಕಾಲ ಪತ್ರಿಕಾ ಸಂಪರ್ಕವು ಅಷ್ಟಾಗಿ ನಿಮಗಿರಲಿಲ್ಲ. ಪುನಃ ನೀವು ಪತ್ರಿಕೋದ್ಯಮಕ್ಕೆ ಇಳಿಯುವ ತನಕ ನಿಮಗೂ ನೆಮ್ಮದಿ ಇರಲಿಲ್ಲ ಎಂದೇ ನನ್ನ ಭಾವನೆ. ಈ ಎಲ್ಲ ಹಂತಗಳಲ್ಲೂ ನೀವು ಕೊರವಂಜಿಯ ಪ್ರಕಾಶಕರಾಗಿಯೇ ಇದ್ದು ಆಧ್ಯಾತ್ಮಿಕ ಬೆಂಬಲವನ್ನು ನೀಡಿದಿರಿ. ಈ ಉಪಕಾರಕ್ಕಾಗಿ ಬಿಚ್ಚಿದ ಮನಸ್ಸಿನಿಂದ ಧನ್ಯವಾದವನ್ನು ಅರ್ಪಿಸುತ್ತಿದ್ದೇನೆ.

ಕೊರವಂಜಿಯ ಲೌಕಿಕ ವ್ಯವಹಾರಗಳ ದೃಷ್ಟಿಯಿಂದ ಇನ್ನು ಮುಂದೆ ಲೌಕಿಕ ಹೊಣೆಯನ್ನು ಹೊತ್ತವರೇ, ಪ್ರಕಾಶಕರಾಗಿರುವುದು ಲೇಸು ಎಂದೆನಿಸಿತು. ತಾವೂ ಈ ಆಲೋಚನೆಯನ್ನು ಅನುಮೋದಿಸಿದಿರಿ. ಲೌಕಿಕವಾಗಿ ಈ ಮಾರ್ಪಾಡಿಗೆ ಬೇಕಾದುದೆಲ್ಲವನ್ನೂ ಮಾಡಿಯಾಯಿತು.

ಕೊರವಂಜಿಯ ಉದ್ಧಾಮ ಹಿತೈಷಿಗಳಾಗಿಯೇ ಮುಂದೂ ಇರುವಿರಿ ಎಂದು ನನ್ನ ಧೃಡನಂಬಿಕೆ. ಆದಷ್ಟು ಕಾಲ ಕೊರವಂಜಿಯು ತಿಂಗಳು ತಿಂಗಳೂ ನಿಮ್ಮನ್ನು ಕಂಡು ಕ್ಷೇಮ ಸಮಾಚಾರವನ್ನು ತಿಳಿಸುತ್ತಾಳೆ.

ಮತ್ತೊಮ್ಮೆ ಧನ್ಯವಾದಗಳು.

ಒರಳು ನೋಡಿ

"ಬೆಂಗಳೂರಿಗೆ ಎಂಟೇ ಮೈಲು ದೂರ ಕಣೇ! ಅಲ್ಲಿ ಶ್ಯಾನುಭೋಗರು ಕಣೆ. ಶ್ಯಾನುಭೋಗ ಶಿವರಾಮಯ್ಯ ಅಂದರೆ ಭಾರಿ ಕುಳ ಕಣೆ. ಧಿವಾಕುಪಾಳ್ಯ ದಲ್ಲಿ ಅವರದೇ ಹದಿನಾರಂಕಣದ ಮನೆ. ಜಾತಕ ಕೊಡುಕ್ಕೆ ಅಂತ ನಾವಿಬ್ಬರೂ ಹೋದಾಗ ಅವರೇ ಮನೆಯೆಲ್ಲಾ ತೋರಿಸಿದರು." ಅವರ ಅಡಿಗೆ ಮನೆ ಊಟದ ಮನೆ ಇವೆರಡೇ ನಮ್ಮನೆ ಕಾಂಪೌಂಡಿನಷ್ಟಿದೆ ನೋಡಮ್ಮಾ! ಹುಡುಗನೂ ತಕ್ಕ ಮಟ್ಟಿಗೆ ಇದಾನೆ. ಕಾಲೇಜು ಮೆಟ್ಟಿಲು ಹತ್ತದೆ ಇರಬಹುದು. ಆದರೆ ಸುಗುಣಿ" ಎಂದು ಅಮ್ಮ ಪುಸಲಾಯಿಸಿದರು. ನನಗೂ ಇಪ್ಪತ್ತೈದರ ಪ್ರಾಯ. ಕಂಕುಳಲ್ಲಿ ಪುಸ್ತಕಗಳನ್ನ ಎತ್ತಿಕೊಂಡು ಕಾಲೇಜಿಗೆ ಹೋಗೀ ಹೋಗೀ ಬೇಜಾರಾಗಿತ್ತು, ಕಾಲೇಜು ರಸ್ತೆಯಲ್ಲೇ ಬರೀ ಸಿನಿಮಾ ಮಂದಿರಗಳು. ಒಂದೊಂದರ ಮುಂದೆಯೂ ಆಳುದ್ದದ ಚಿತ್ರಗಳು. ತಾಯಿ ಮಗುವನ್ನೆತ್ತಿಕೊಂಡಿದ್ದ, ಹಾಗಾಗುವುದಕ್ಕೆ ಅಗತ್ಯ ವಾದ, ವಿಷಯಗಳ ಚಿತ್ರಗಳೇ. ಪಾರದ ಮೇಲೆ ಮನಸ್ಸನ್ನು ಹಿಡಿದಿಡಲು ತ್ರಾಸು ಆಗುತ್ತಿತ್ತು. "ಹುಡುಗನ್ನ ನೋಡಬೇಕು ಅಮ್ಮ! ಅವರೂ ನನ್ನ ನೋಡಿ ಒಪ್ಪ ಬೇಕಲ್ಲ!" ಎಂದು ಮುಗುಮ್ಮಾಗಿ ಹೇಳಿದ್ದೆ. "ನೀನು ಹೇಳೋದು ನ್ಯಾಯ ಕಣೇ ತಾಯಿ. ಅವರನ್ನ ಬರಹೇಳೋಣ" ಎಂದಳು ಅಮ್ಮ. ಮುಂದಿನ ಭಾನು ವಾರ ಮಗ ತಂದೆ ಇಬ್ಬರೂ ಟ್ಯಾಕ್ಸಿಯಲ್ಲಿ ರಾಹುಕಾಲಕ್ಕೆ ಮುಂಚೆಯೇ ಬಂದಿಳಿದರು, ನಾನೂ ಕಿಟಿಕಿಯಲ್ಲೇ ಚೆನ್ನಾಗಿ ನೋಡಿದೆ. ಆಮೇಲೆ ಒಳಕ್ಕೆ ಬಂದು ಕೂತಮ್ಯೇಲೆ ಕಾಫಿ ತಿಂಡಿ ಕೊಡುವಾಗಲೂ ನೋಡಿದೆ. ಬೆಳದಿಂಗಳಂತಹ ಹಾಲು ಮುಖ. ನೇರ ಮೂಗು, ಕಾಮನ ಬಿಲ್ಲಿನಂತಹ ತುಟಿಗಳು. ಅಂದವಾದ ಕ್ರಾಪು. ಮುಂಗುರುಳ ಕಿರಿಗೊಂಚಲೊಂದು ಹಣೆಯ ಮೇಲೆ ನೃತ್ಯಮಾಡುತ್ತಿತ್ತು. ಸುಮಾರು ಐದಡಿ ಏಳಂಗಲ ಎತ್ತರ. ನೂರೂ ಐವತ್ತು ಪೌಂಡು ತೂಕ. ಕಟ್ಟುಮಸ್ತಾದ ಜಟ್ಟಿಯ ದೇಹ ರಚನೆ. ಎಲ್ಲವೂ ಸಮರ್ಪಕವಾಗಿತ್ತು. ಸಿನಿಮಾ ಮಂದಿರದ ಆಳುದ್ದದ ಚಿತ್ರದ ತರಹಾನೇ ಇದ್ದ. ಪರವಾಗಿಲ್ಲ. ತಡಕೋಬಹುದು ಅಂತಂದುಕೊಂಡೆ.

ಮುಖವನ್ನ ಹುಷಾರಾಗಿ ತಿರುಗಿ ನೋಡಿದೆ. ಮಗುವಿನ ಮುಖ. ಏನೊಂದೂ ಜೋರು ಕಾಣಿಸಲಿಲ್ಲ. ಮೂಗುದಾರ ಇಲ್ಲದೆ ಇದ್ದರೂ ಎತ್ತಿನಂತೆ ಇವನನ್ನ ಹತೋಟಿಯಲ್ಲಿಟ್ಟುಕೊಳ್ಳಬಹುದು, ಜತೇಲಿ ಕರಕೊಂಡು ವಾಕಿಂಗ್ ಹೋದರೆ

ಕಂಡ ಹೆಣ್ಣುಗಳು ಹೊಟ್ಟೆ ಕಿವುಚಿಕೊಳ್ಳುತ್ತಾರೆ ಎಂದನ್ನಿಸಿತು. ಬಿ. ಎ, ಬಿ. ಎಲ್. ಮಾಡದೆ ಇದ್ದರೆ ಏನಂತೆ? ಬಿ, ಎ. ಅಂತ ಪಕ್ಕದಲ್ಲಿ ನಡೆಸಿಕೊಂಡು ಹೋಗುಕ್ಕೆ ಆಗುತ್ತೈ? ಹಾಗೆ ಕರೆದುಕೊಂಡು ಹೋದರೂ ಯಾರು ನೋಡಿ ಕರುಬುತ್ತಾರೆ? ಎಂದೆಲ್ಲ ಯೋಚಿಸಿ ಇವನನ್ನು ಭದ್ರಮಾಡಬೇಕು ಅನ್ನಿಸಿತು.

ಅಪ್ಪ ಹೇಳಿದ್ದರು. ಭಾರಿ ಕುಳ ಅಂತ. ಗಂಡಿನ ತಾತ ಶ್ಯಾನುಭೋಗ ಶಿವರಾಮಯ್ಯನವರು ವೈಭವಜೀವಿ ಅಂತ. ಅವರ ಮಗ ಸುಮಾರು ನಗದಿ ಗುಮಾಸ್ತನ ತರಹವೇ ಇದ್ದರು. ಮೊಮ್ಮಗನಲ್ಲಿ ತಾತನ ಗುಣ ಮರುಕಳಿಸುತ್ತೆ ಎಂದು ಜನ ಹೇಳ್ತಾರಲ್ಲವೇ? ಅಂದಮೇಲೆ ವೈಭವ ಜೀವನ ಸಾಧ್ಯವಾಗಬಹುದು. ಎಂದೆಲ್ಲಾ ಯೋಚಿಸಿದೆ. ಆಗಲಿ ಅಂತ ಅಂದುಬಿಡೋಣ ಅಂತ ನಿರ್ಧಾರ ಮಾಡಿ ಕೊಂಡೆ.

ತಲೆಯೆತ್ತಿ ಹುಡುಗ ನನ್ನನ್ನು ನೋಡಿದನೋ ಇಲ್ಲವೊ ಕಾಣೆ, ಅವರ ತಂದೆ ಯೇನೋ ಅಪ್ಪನಿಗೆ "ತಾಯಿಯಿಲ್ಲದ ಮಗ, ಅವನನ್ನು ಸುಖವಾಗಿ ನೋಡಿಕೊ ಳ್ಳುವ ಸೊಸೆ ಬಂದರೆ ಕೃತಾರ್ಥ" ಎಂದು ಹೇಳಿದರು. ತಾಂಬೂಲ ತೆಗೆದುಕೊಂಡು ಹೊರಟುಹೋದರು. ಮಾರನೆಯ ದಿನವೇ ಆಗಬಹುದು ·ಅಂತ ಹುಡುಗ ಅಂದ ಅಂತ ಸಮಾಚಾರವನ್ನು ಆಳಿನ ಕೈಲಿ ಹೇಳಿ ಕಳಿಸಿದರು.

ಛತ್ರ ಬೆಂಗಳೂರಿನಲ್ಲಿ ಸಿಕ್ಕುತ್ತಿದ್ದ ಹಾಗೆ ಮದುವೆ ಮುಹೂರ್ತ ನಿಷ್ಕರ್ಷೆ ಮಾಡಿದರು. ತಕ್ಕಮಟ್ಟಿಗೆ ಅದ್ದೂರಿ ಮದುವೆ ಮಾಡಿದರು, ಅಪ್ಪ ಅಮ್ಮ, ಫುಟ್ ಬಾಲ್‌ನಂತಹ ಉಂಡೆಗಳನ್ನು ಅಮ್ಮ ಮಾಡಿಸಿದ್ದಳು. ಸ್ಕೂಟರುಗಳ ಗಾಲಿಗಳಹಾಗಿದ್ದ ಚಕ್ಕುಲಿಗಳನ್ನು ಮಾಡಿಸಿದ್ದಳು. ದೀಪದ ಕಂಬದಂತಿದ್ದ ಗೋಪುರದ ಉಂಡೆಗಳನ್ನು ಮರೆಸಿದ್ದಳು, ಅಮ್ಮ. ಮದುವೆಯಾದ ಮೂರನೆ ದಿನ ನೀರು ಹಾಕಿಕೊಂಡು ಗಂಡನ ಮನೆಗೆ ಹೊರಟೆ.

ಬೆಂಗಳೂರಿಂದ ಎಂಟನೇ ಮೈಲಿನಲ್ಲಿ ಎಡಕ್ಕೆ ಒಂದು ಅಡ್ಡರಸ್ತೆ ತಿರುಗುತ್ತೆ. ಆ ರಸ್ತೆಯಲ್ಲಿ ಎರಡು ಫರ್ಲಾಂಗ್ ದೂರ ಹೋದರೆ ಧಿಮಾಕುಪಾಳ್ಯ ಸಿಗುತ್ತೆ. ಇಪ್ಪತ್ತುಮೂವತ್ತು ಗುಡಿಸಲುಗಳಿವೆ. ಹನುಮಂತನ ದೇವಸ್ಥಾನ ಇದೆ. ಅದರ ಹಿಂದೆಯೇ ದೊಡ್ಡ ಆಲದ ಮರ ಇದೆ. ಅದರ ಪಕ್ಕದಲ್ಲಿಯೇ ಒಂದು ತಿಳಿನೀರಿನ ಕೊಳ ಇದೆ, ಬಲು ರುಚಿಯಾದ ಸೀನೀರಿನ ಕೊಳ, ಪ್ರೈಮರಿ ಶಾಲೆಯೊಂದಿದೆ. ಆ ಹಳ್ಳಿಯಲ್ಲಿ ನಮ್ಮ ಮನೆಯೇ ಅರಮನೆ. ಬೆಂಗಳೂರಿನಲ್ಲಿ ಆ ಮನೆ ಇದ್ದಿದ್ದರೆ, ಸರ್ಕಾರಕ್ಕೆ ಬಾಡಿಗೆಗೆ ಕೊಟ್ಟಿದ್ದರೆ, ಸಾವಿರ ರೂಪಾಯಿ ಬಾಡಿಗೆ ದುಡಿಯುವಂತಹ ಮನೆ. ಅಮ್ಮ ಹೇಳಿದ ಹಾಗೇ ಇತ್ತು ಅಡಿಗೆ ಮನೆ. ನಮ್ಮ ಕಾಲೇಜಿನ ಕ್ಯಾಂಟೀ ನಷ್ಟು ದೊಡ್ಡದಾಗಿತ್ತು. ಒಂದು ಮೂಲೆಯಲ್ಲಿ ಹರಿಗೋಲೆ, ಇನ್ನೊಂದು ಮೂಲೆ ಯಲ್ಲಿ ಒಂದು ಒರಳು. ಮೂರನೆ ಮೂಲೆಯಲ್ಲಿ ಮೂರು ತಲೆಯ ಒಲೆ ಒಂದು.

ನಿತ್ಯದ ಅಡಿಗೆಗೆ. ನಾಲ್ಕನೆ ಮೂಲೆಯಲ್ಲಿ ಪಾತ್ರೆಗಳನ್ನಿಡುವ ದೊಡ್ಡ ಬಡುಗಳು. ಅಚ್ಚೇರು ಅಕ್ಕಿಯಿಂದ ಇಪ್ಪತ್ತು ಸೇರು ಅಕ್ಕಿ ತನಕ ಬೇಯಿಸಬಹುದಾದ ತಪ್ಪಲೆಗಳಿದ್ದುವು. ಅದಕ್ಕೆ ತಕ್ಕ ಕಡಾಯಿಗಳು, ಕೊಳದಪ್ಪಲೆಗಳು.

ಎಂಟು ಕಂಬದ ತೊಟ್ಟಿ ಮನೆ. ಸುತ್ತಲೂ ಎಂಟು ಕೊರಡಿಗಳು. ಹಿಂದುಗಡೆಗೆ ಅಡಿಗೆ ಮನೆ, ಊಟದ ಮನೆ, ಬಚ್ಚಲು ಮನೆ. ಮುಂದುಗಡೆಯಲ್ಲಿ ದೊಡ್ಡ ಹಜಾರ. ಅದರ ಮುಂದೆ ದೊಡ್ಡ ವರಾಂಡಾ. ಕಟಕಟೆ ಹಾಕಿದ ವರಾಂಡಾ.

ಮನೆ ಪಕ್ಕದಲ್ಲಿ ದನದ ಕೊಟ್ಟಿಗೆ. ಹತ್ತು ಹಸು, ಎಂಟೆಮ್ಮೆ ಕಟ್ಟಬಹುದಾದ ವಿಶಾಲವಾದ ಕೊಟ್ಟಿಗೆ, ಸಧ್ಯ! ನಾನು ಮನೆ ಹೊಸಿಲು ದಾಟಿದಾಗ ಕೊಟ್ಟಿಗೆ ಖಾಲಿ ಇತ್ತು.

ನೋಡಿದಾಗ ಮೊದಲು ನಾನು ಊಹಿಸಿದ್ದೆಲ್ಲವೂ ದಿಟವೆಂದು, ಹೋದ ಎರಡು ತಿಂಗಳಲ್ಲಿಯೇ ತಿಳಿಯಿತು. ದಿಟವಾಗಲೂ ಸಾಧುವಾದ ಪ್ರಾಣಿ ನನ್ನ ಗಂಡ. ಹೇಳಿದ ಹಾಗೆ ಕೇಳುತ್ತಾರೆ, ತಾವಾಗಿ ಯಾವುದೊಂದನ್ನೂ ಮಾಡುವುದಿಲ್ಲ. ನಾನು ಹೇಳಿಕೊಟ್ಟರೆ ಮಾಡುತ್ತಾರೆ. ಮನೆಯ ವಹಿವಾಟೆಲ್ಲಾ ಮಾವನವರದೇ. ಅವರೂ ಅಷ್ಟಾಗಿ ಚಾಲೂಕಿನವರಲ್ಲ, ಒಂದೆರಡು ವರ್ಷಗಳಲ್ಲಿಯೇ ಮನೆಯ ಆಸ್ತಿಪಾಸ್ತಿಗಳು ಆಗುಹೋಗುಗಳು ಎಲ್ಲವೂ ತಿಳಿಯಿತು,

ಇದ್ದಬದ್ದ ಜಮೀನೆಲ್ಲವೂ ಇತರರಿಗೆ ಭೋಗ್ಯಕ್ಕೆ ವಹಿಸಲಾಗಿತ್ತು. ಆಸ್ತಿಗಿಂತ ಸಾಲ ಹೆಚ್ಚು. ಸಂಪಾದನೆಯ ಮಾರ್ಗ ಮಾವನವರಿಗೂ ತಿಳಿಯದು, ಮಗನಿಗೆ ಮೊದಲೇ ತಿಳಿಯದು. ಭಾರೀ ಕುಳ ಅಂತ ಅಪ್ಪ ಅಮ್ಮ ಮದುವೆ ಮಾಡಿಕೊಟ್ಟಿದ್ದರು. ಚೆಂದುಳ್ಳ ಹುಡುಗ ಅಂತ ನಾನೂ ಭಾವೀಗೆ ಬಿದ್ದಿದ್ದೆ.

ಇದು ಮನಸ್ಸಿಗೆ ನಾಟುವ ಹೊತ್ತಿಗೆ ನಮ್ಮ ಮಾವನವರು ತೀರಿಕೊಂಡರು. ಮೊಮ್ಮಗನನ್ನು ನೋಡದೆ ಸಾಯಬೇಕಲ್ಲಮ್ಮಾ! ಅಂತ ಏನೋ ಹೇಳಿದರು. ಯಾವ ವೈಭೋಗಕ್ಕೆ ಮೊಮ್ಮಗ ಬೇಕು? ಎಂದು ನಾನೂ ಕೇಳಲಿಲ್ಲ. ಸಾಯೋ ಹಿರಿಯರ ಮೇಲೆ ನನ್ನ ಬಡತನದ ಬೇಗೇನ ತೀರಿಸಿಕೊಳ್ಳಬಾರದು, ಅಲ್ಲವೇ?

ಮಾವ ಸತ್ತಮೇಲೆ ಏನು ಮಾಡುಕ್ಕೂ ತೋಚದು. ಬೆಂಗಳೂರಿಗೆ ಹೋಗಿ ಮ್ಯಾಡಂ ಕೆಲಸಕ್ಕೆ ಸೇರಿಕೊಳ್ಳಲೇ? ಎಂದನ್ನಿಸಿತು. ತಡಿ! ಸ್ನೇಹಿತರಿಬ್ಬರನ್ನು ಕೇಳಿ ನಂತರ ತೀರ್ಮಾನಿಸಿಕೊಳ್ಳೋಣ ಅಂತ ಮ್ಯಾಡಂ ಆಗಿದ್ದ ಇಬ್ಬರು ಕಾಲೇಜು ಗೆಳತಿಯರಿಗೆ ಬಂದು ಹೋಗಿ ಭಾನುವಾರ ಅಂತ ಕಾಗದ ಬರೆದು ಕಳಿಸಿದೆ. ಮದುವೆಯಾಗಿ ಹೋದ ಹೆಣ್ಣುಮಕ್ಕಳು ಹೆತ್ತವರಿಗೆ ತಮ್ಮ ಕಷ್ಟಗಳನ್ನು ಹೇಳಿಕೊಳ್ಳಬಾರದು ಅಲ್ಲವೇ?

ಗೆಳತಿಯರಿಬ್ಬರೂ ಬಂದರು. ಮನೆಯನ್ನು ನೋಡಿ ಬಾಯಿ ಬಾಯಿ ಬಿಟ್ಟರು, ನನ್ನ ಗಂಡನನ್ನು ನೋಡಿ ಬಾಯಿ ಬಾಯಿ ಬಿಟ್ಟರು. ಆಂಜನೇಯನ ಗುಡಿ ಕಂಡಾಗ,

ಆ ದೇವರಂತೇ ಆಡಿದರು ಆಲದ ಮರ ನೋಡಿ ಅಬ್ಬಬ್ಬಾ ಅಂತ ಅದನ್ನೇ ತಬ್ಬಿ ಕೊಳ್ಳುಕ್ಕೆ ಹೋದರು. ಕೊಳ ನೋಡಿ " ಎಷ್ಟು ಚೆನ್ನಾಗಿದೆಯೋ ನೀರು " ಅಂತ ಬೊಗಸೆ ಬೊಗಸೆ ಕುಡಿದರು.

ಮಧ್ಯಾಹ್ನ ಊಟ ಮಾಡಿದ ಮೇಲೆ ನನ್ನ ತಾಪತ್ರಯ ತಿಳಿಸಿದೆ. " ಖಂಡಿತ ವಾಗಿಯೂ ಮ್ಯಾಡಂ ಕೆಲಸ ಬ್ಯಾಡ" ಅಂದರು " ನಿನ್ನ ಈ ದೊಡ್ಡ ಮನೆಯಲ್ಲೇ ಒಂದು ಹೋಟಲು ಶುರುಮಾಡು ಶನಿವಾರ ಭಾನುವಾರ ರಜಾದಿನಗಳಲ್ಲಿ ಯಾರಾ ದರೂ ಬಂದು ಸುಖವಾಗಿರಬಹುದು ಅಂತ ಜಾಹೀರು ಮಾಡು. ಬೆಂಗಳೂರಿಂದ ಹಿಂಡಿಗೆ ಹಿಂಡೇ ಬರುತ್ತೆ. ಕೈ ತುಂಬ ಹಣ ಸಿಗುತ್ತೆ " ಅಂತಂದರು.

" ಹಾಗೆ ಮಾಡ್ತೀನಿ, ಕಣ್ರಿ, ಹೋಟಲು ಅಂದಮೇಲೆ ಮೇಲುತ್ಸುವಾರಿ ನಾನು ನೋಡಿಕೋಬಹುದು. ಆದರೆ ಅಡಿಗೆಗೆ ಯಾರಾದರೂ ಬೇಕು. ಬೆಂಗಳೂರಿಗೆ ಹೋಗಿ ಕಳಿಸ್ತೀರಾ" ಎಂದೆ. ಹ್ಞೂ ಅಂತ ಒಪ್ಪಿಕೊಂಡರು, ಹಿಂತಿರುಗಿದರು.

ಮೂರೇ ದಿವಸದಲ್ಲಿ ಅಡಿಗೆಯವನೊಬ್ಬ ಬಂದ, ಅಡಿಗೆ ಮನೆ ನೋಡಿದ, ಒರಳು ನೋಡಿದ. ಒಂದು ಸರ್ತಿ ದೋಸೆ ಹಿಟ್ಟೋ ಇಡಲಿ ಇಟ್ಟೋ ತಿರುವಿದರೆ ದಿನಕ್ಕೆಲ್ಲಾ ಒದಗುತ್ತಪ್ಪಾ ಎಂದೆ. ಅಷ್ಟು ದೊಡ್ಡ ಒರಳು. ಅದರಲ್ಲಿ ಕೈ ಇಳಿಸಿ ಆಳ ನೋಡಿದ ಅವ. ಗುಂಡಕಲ್ಲು ನೋಡಿದ. ಬರ್ತೀನಿ ತಾಯಿ ಅಂತ ಬೆಂಗಳೂ ರಿಗೆ ಓಡಿಯೇ ಬಿಟ್ಟ ಆಮೇಲೆ ಎಂಟು ಹತ್ತು ಜನ ಬೆಂಗಳೂರಿಂದ ಅಡಿಗೆಯವರು ಬಂದರು. ಎಲ್ಲರೂ ಒರಳು ನೋಡಿ, ಗುಂಡಕಲ್ಲು ಕಂಡು ಕೆಲಸ ಸಂಬಳ ಇತ್ಯಾದಿ ಯಾವುದೊಂದೂ ಮಾತನಾಡದೆ ಪೆಚ್ಚು ಪೆಚ್ಚಾಗಿ ದೇಶಾವರದ ನಗೆ ಹೂಡುತ್ತಾ ಓಡಿಬಿಟ್ಟರು.

ಈ ಹೊತ್ತಿಗೆ ಆಗಲೇ ದನದ ಕೊಟ್ಟಿಗೆಯನ್ನು ಸಣ್ಣ ಮನೆಯನ್ನಾಗಿ ಮಾರ್ಪ ಡಿಸಿ ಅಲ್ಲಿಗೆ ನಾವಿಬ್ಬರೂ ಹೋಗಿದ್ದೆವು. ಹಳೇ ಮನೆಯೇ ಹೋಟಲಾಗಿರಲಿ ಅಂತ. ಅಲ್ಲಿರೋದು ಆಮೇಲೆ ಸುಖವಿಲ್ಲ ಅಂತ.

ಬೆಂಗಳೂರಿಂದ ಜನ ಬರುಕ್ಕೆ ಶುರು ಮಾಡಿದರು. ಬೈಸಿಕಲ್ಲಿನಲ್ಲಿ ಹಿಂಡು ಹಿಂಡಾಗಿ ಹುಡುಗರು, ಹುಡಗಿಯರು; ಸ್ಕೂಟರುಗಳಮೇಲೆ ಜತೆ ಜತೆಗಳು. ಮೋಟಾ ರಿನಲ್ಲಿ ದಂಡಿಗೆ ದಂಡೇ ಕಟ್ಟಿಕೊಂಡು, ಪ್ರತ್ಯೇಕ ಸುಖೀ ಬಸ್ಸುಗಳ ತುಂಬಾ ಜನ ರಜಾಕ್ಕೆ ಬರುಕ್ಕೆ ಶುರು ಮಾಡಿದರು.

'ಇವರು' ಬಂದವರ ಸುಖ ದುಃಖ ನೋಡಿಕೊಳ್ಳುವುದು. ಅಡಿಗೆ ಮನೆಗೆ ಬಂದು ನನ್ನಿಂದ ತಿಂಡಿ ತೀರ್ಥ ಇಸುಕೊಂಡು ಹೊರಕ್ಕೆ ಹೋಗಿ ಆಲದ ಮರದ ಕೆಳಗೆ ಬುಟ್ಟಿ ಬುಟ್ಟಿ ಸರಬರಾಜಿಸುವುದು. ಕೊಳದ ಹತ್ತಿರ ತಟ್ಟೆ ತಟ್ಟೆ ತೊಗೊಂಡು ಹೋಗಿ ಕೊಟ್ಟುಬರುವುದು. ರಜಾ ದಿನ ಅಂದರೆ ಇನ್ನೂರು ಮುನ್ನೂರು ರೂಪಾಯಿ ಎಣಿಸುತ್ತಿದ್ದರು.

ನಾನು ಅಡಿಗೆ ಮನೆಯಲ್ಲಿ ಒರಳಿನ ಮುಂದೆ ಕೂತು ತಿರುವೋದು, ಹರಿ ಗೋಲು ಮುಂದೆ ಕೂತು ಅಡಿಗೆ ಮಾಡೋದು.

ಊರಿಗೆ ರಜಾ ಬಂದರೆ ನನ್ನ ಸೊಂಟ ಮುರಿದುಹೋಗುತ್ತೆ. ಹೀಗೆ ಸ್ವಲ್ಪ ದಿನ ದುಡಿದರೆ ಕೈ ತುಂಬಾ ಹಣ ಕೂಡಿದರೆ, ಬೆಂಗಳೂರಿಂದ ತಿಂಡಿ ತೀರ್ಥಾನ ರಜಾ ದಿನದ ಬೆಳಗಿನ ರಷ್ಯಾಮು ತರಿಸಿ, ಮಾರೋಣ, ಅದಕ್ಕೇ ಒಂದು ಲಾರಿ ಕೊಳ್ಳಬಹುದು ಎಂದು ಯೋಚನೆ ಮಾಡಿದೆ.

*　　　*　　　*　　　*

ಆದರೆ ಮೊನ್ನೆ ರಜಾ ಇಲ್ಲ ಏನೂ ಇಲ್ಲ. ಇಬ್ಬರು ಯುವತಿಯರು ಸ್ಕೂಟರ ಮೇಲೆ ಬಂದರು. 'ಇವರ' ಹತ್ತಿರ ನಿಮ್ಮ ಹಳ್ಳಿ ತೋರಿಸಿ. ಆಂಜನೇಯನ ಗುಡಿ ಪುರಾತನದ್ದಂತೆ. ಅದರ ಚರಿತ್ರೆ ಹೇಳಿ ಅಂತೆಲ್ಲಾ ಮಾತನಾಡಿಸುತ್ತಾ ನಿಂತರು. ಸಿನಿಮಾ ಚಿತ್ರಗಳ ತರಹಾನೇ ಎದೆ ಮುಂದೆ ಮಾಡಿ ಚಕ್ಕಂದ ಆಡುತ್ತಿದ್ದರು.

ನಿರ್ಧಾರ ಮಾಡಿಬಿಟ್ಟೆ. ಬೆಂಗಳೂರಿಗೆ ಹಿಂತಿರುಗಿ ಮ್ಯಾಡಂ ಆಗಲೇಬೇಕು, " ಇವರ ಕೂದಲು ನೆರೆತ ಮೇಲೆ ಹಿಂತಿರುಗಿ ಹಳ್ಳಿಗೆ ಬರಬೇಕು. ಆ ತನಕ ಬೆಂಗಳೂರಿನ ಅಡಿಗೆ ಮನೇಲಿ ಇವರು ದುಡಿತಾ ಇರಲಿ. ಅಲ್ಲಿ ಸೊಂಟ ಮುರಿದುಕೊಳ್ಳಲಿ ಸ್ವಲ್ಪ ದಿನ ಅಂತ ತೀರ್ಮಾನಿಸಿದ್ದೇನೆ.

—ಶ್ರೀಮತಿ ನಿಶಾನಾರಾಣಿ

ಗೌರೀ ಹಬ್ಬಕ್ಕೆ ಅಂತ ಅರವಾವೊದ್ದು ಅವನ ಹೆಂಡತೀಗೆ ಹೊಸ ಸೀರೆ ಕೊಂಡು ಕೊಟ್ಟ. ಬೆಲೆ ೮೦ ರೂಪಾಯಿ,

ಬಲು ಜಾಣೆ ಅವನ ಹೆಂಡತಿ. "ಇಂತಹ ಒಳ್ಳೇ ಸೀರೆ ಕೊಂಡು ಪ್ರೀತಿಯಿಂದ ಕೊಟ್ಟಿದ್ದೀರಿ ಅಂದ್ರೆ. ಇದನ್ನು ನಾಜೂಕಾಗಿ ಒಗೆದು ಉಡಬೇಕು. ಅದಕ್ಕೇ ಒಂದು Washing Machine ಅನ್ನು ಕೊಂಡು ಕೊಟ್ಟುಬಿಡಿ" ಅಂತ ಕೊಂಕಿದಳಂತೆ.

*　　　*　　　*　　　*

ಕಂಸ ಮಾವ

ಪುರಾತನ ಕಾಲದಿಂದಲೂ ಮಾವ ಎಂದರೆ ಕಂಸಮಾವ ಅಥವಾ ಮಾರೀಚ ಮಾವ ಅಂತ ಅಂದು ಆಡಿಕೊಳ್ಳುತ್ತಿದ್ದರು. ಆದರೆ ನನ್ನ ಭಾಗ್ಯಕ್ಕೆ ಗೋಪಾಲ ಮಾವ ದೊರಕಿದ್ದ. ನಮ್ಮಮ್ಮನ ಅಣ್ಣ. ಎಷ್ಟು ಆದರದಿಂದ ನನ್ನನ್ನು ನೋಡಿ ಕೋತಾ ಇದ್ದ ಅಂತ. ಬೇಸಿಗೆ ರಜ ಬರೋದೇ ಸಾಕು. ಓಡೋಡಿ ಬಂದು ರಜಕ್ಕೆ ನಮ್ಮೂರಿಗೆ ಕರಕೊಂಡು ಹೋಗ್ತೀನಿ ಅಂತ ತಂಗೀಗೆ ಹೇಳಿ, ಭಾವನ್ನೊಪ್ಪಿಸಿ, ಕರಕೊಂಡು ಹೋಗ್ತಾ ಇದ್ದ. ಅಲ್ಲಿಗೆ ಹೋಗುಕ್ಕೆ ನನಗೂ ಆಸೆ. ಅವರ ಮನೆ ಹಿತ್ತಲಲ್ಲಿ ಚಂದ್ರಸೀಬೇ ಹಣ್ಣಿನ ಮರವಿತ್ತು. ನನಗೆ ಆಗ ೮–೧೨ರ ಪ್ರಾಯ.

ಆದರೆ ಹದಿನೆಂಟು ವರ್ಷ ಆಯಿತು ನನಗೆ. ನಾಲ್ಕು ವರ್ಷದ ಪುಟಾಣಿ ತಮ್ಮ ಒಬ್ಬ ಇದ್ದ ನನಗೆ. ನನ್ನ ಮೇಲಿನ ಮೋಹವೆಲ್ಲಾ ಹೋಗೇಬಿಡೋಣವೆ ಗೋಪಾಲ ಮಾವನಿಗೆ. ಎಲ್ಲ ಮೋಹವನ್ನು ತಮ್ಮನಿಗೇ ತೋರಿಸೋದೇ ? ತಮ್ಮನ್ನ ಏನಾದರೂ ಮಾಡಿ ಪುಸಲಾಯಿಸಿ ನನ್ನ ಕಡೆಗೆ ತಿರುಗಿಸಿಕೊಳ್ಳಬೇಕು ಅಂತ ಅಸಾಧ್ಯ ಆಸೆ ಹುಟ್ಟಿತು. ಆ ದಿನ ಬೆಳಿಗ್ಗೇನೆ ಗೋಪಾಲಮಾವ ಅವನನ್ನು ಕರಕೊಂಡು ಅಂಗಡಿ ಬೀದೀಗೆ ಹೋಗಿ ಬಂದಿದ್ದ. ಆಮೇಲೆ ತಮ್ಮ ನನ್ನನ್ನು ನೋಡಿದರೂ ನೋಡದವನ ಹಾಗೆ ಹೋಗೋದೇ ?

ಸಂಜೆ ಕಾಲೇಜಿಂದ ಹಿಂತಿರುಗಿದ ಮೇಲೆ ತಮ್ಮನನ್ನು ವಲಿಸಿಕೊಳ್ಳಬೇಕು ಎಂದು ನಿರ್ಧರಿಸಿದೆ.

ಕಾಲೇಜಿಂದ ಬಂದಾಗ ತಮ್ಮ ಹೊರಗೆ ಕಪ್ಪೆ ಗೂಡು ಕಟ್ತಾ ಇದ್ದ. " ಬಾ ಮರಿ, ಕಪ್ಪೇ ಗೂಡೇನು ಚೆನ್ನ ! ಅದರ ಬದಲು ಕಾಗದದ ರೊಟ್ಟಿನಲ್ಲಿ ಮನೆ ಕಟ್ಟೋದು ಹೇಳಿಕೊಡ್ತೀನಿ " ಅಂತ ಕರೆದೆ. ಆಸೆಯಿಂದ ಓಡಿ ಬಂದ. ಕಾಲೇಜ್ ನೋಟು ಬುಕ್ಕಿನ ಅಟ್ಟೆ ಹರಿದು, ಕತ್ತರಿ ತಂದಿಟ್ಟುಕೊಂಡು, ಗೋಂದು ಗುಂಡು ಸೂಜಿ ಸಿದ್ಧಮಾಡಿ, ಮನೆ ಕಟ್ಟುಕ್ಕೆ ಶುರು ಮಾಡಿದೆ, ಇದು ಯಾಕೆ ? ಅದು ಯಾಕೆ ? ಅಂತ ಕೇಳ್ತಾನೇ ಇದ್ದ. ಮನೆ ಕಟ್ಟಿ ಮುಗಿಸಿದೆ.

ತಡಿ ಅಣ್ಣ ಅಂತ ಹೇಳಿ ಒಳಕ್ಕೆ ಓಡಿ ಹೋದ. ಗೋಪಾಲ ಮಾವನಿಗೆ ಹೇಳ್ತಾನೆ ಅಂದುಕೊಂಡಿದ್ದೆ. ಸರಸರ ಅಂತ ಬಂದ. ರಟ್ಟಿನ ಮನೆ ಎದುರಿಗೆ ನಿಂತುಕೊಂಡ.ಕೈಲಿದ್ದ ಪಿಸ್ತೂಲು ತೆಗೆದುಕೊಂಡು ಮನೆಗೆ ಬಾರಿಸಿದ. ಮನೆ ಮುರಿದು ಬಿತ್ತು.

ಬೆಳಿಗ್ಗೆ ಅಂಗಡೀಗೆ ಹೋಗಿದ್ದಾಗ ಗೋಪಾಲ ಮಾವ ಆಟದ ಪಿಸ್ತೂಲನ್ನು ಮರಿಗೆ ಕೊಂಡುಕೊಟ್ಟಿದ್ದ. ಕಾರ್ಕಿನ ಚೂರಿಟ್ಟು ಬಾರಿಸೋ ಆಟದ ಪಿಸ್ತೂಲು.

ಗೋಪಾಲಮಾವನೂ ಕಂಸ ಮಾವ ಆದ, ನನ್ನ ಭಾಗಕ್ಕೆ.

ಶಿವನ ಸೋಲು

★

ಕೈಲಾಸದಲ್ಲಂದು ಕೋಲಾಹಲ! ಪಾರ್ವತಿ ಪರಮೇಶ್ವರರಿಗೆ ಹಣಾಹಣಿ ಜಗಳ, ಕೇಶಾಕೇಶಿ ಕಾದಾಟ!...ಗೌರಿ ಮುನಿಸಿಕೊಂಡು ಮೂಲೆ ಹಿಡಿದಿದ್ದಾಳೆ; ಮಹಾದೇವ ಮಹಾ ರೋಷದಲ್ಲಿದ್ದಾನೆ. ಎಲ್ಲಿ ಮೂರನೇ ಕಣ್ಣು ಬಿಟ್ಟಾನೋ, ಭಸ್ಮವಾಗಿ ಹೋದೇವೋ ಎಂದು ನಡುಗುತ್ತ ತಲೆ ಮರೆಸಿಕೊಂಡಿದಾರೆ, ನಂದಿ ಭೃಂಗಿಗಳು!

ಆ ದಿನ ಗೌರೀ ಹಬ್ಬ; ಒಂಭತ್ತು ಒಂಭತ್ತೂವರೆ ಸಮಯ. ಎಂದಿನಂತೆ ಪಟ್ಟೆ ಪೀತಾಂಬರವುಟ್ಟು, ನಿಲುವಾಭರಣ ತೊಟ್ಟು, ಪೂಜೆ ಮಾಡಿಸಿಕೊಂಡು ಹಿಂದಿರುಗುವ ಇನಿಯಳನ್ನು—ಹುಲಿಚರ್ಮ ಹೊದಿಸಿದ ಬ್ರೆಕ್‌ಫಸ್ಟ್ ಟೇಬಲ್‌ನಲ್ಲಿ ಕೂತು ಎದುರು ನೋಡುತ್ತಿದಾನೆ, ಶಿವ.

ವೃಷಭವಾಹನದ ಹಾರನ್ ಕೇಳಿತು, ಬ್ರೇಕಿನ ಸದ್ದಾಯಿತು. ಹರ. ಕಾತುರದಿಂದ ಕತ್ತೆತ್ತಿದ. ಒಳಕ್ಕೆ ಬಂದ ಗೌರಿದೇವಿ, ನವಿರಾದ ಬೂದು ಬಣ್ಣದ ಬಟ್ಟೆಯುಟ್ಟು, ಅದೇ ರಂಗಿನ ಕುಪ್ಪುಸ ತೊಟ್ಟಿದ್ದಳು. ಕಿವಿಯಲ್ಲಿ ಬೆಳ್ಳಿಯೋಲೆ, ಕಲ್ಚರ್ ಮುತ್ತಿನ ಕೆನ್ನೆಸರಪಳಿ, ಕೊರಳಲ್ಲಿ ಬೆಳ್ಳಿ ಹಾರ, ಕಾಲಿಗೆ ಝುಲ್ ಝುಲ್ ಎನ್ನುವ ಬೆಳ್ಳಿ ಗೆಜ್ಜೆ ಚೈನು ಬಾಚಿ ಮೇಲೆತ್ತಿ ಕಟ್ಟಿದ ಮುಡಿಯೊಳಗೆ ಬೆಳ್ಳಿ ತಿರುಪಿನ ಹೂ, ಕೈಯಲ್ಲಿ ಬೂದು ಬಣ್ಣದ ಚರ್ಮದ 'ಜಂಭ'ದ ಚೀಲ!...ಶಿವ ಬೆಚ್ಚಿದ! "ಇವಳೇ ನನ್ನ ರಾಣಿ? ಇವಳೇ ಕೈಲಾಸದರಸಿ ಶಿವೆ?"

"ಪಾರ್ವತೀ. ಹಬ್ಬದ ದಿನ ಇದೇನು ನಿನ್ನ ಈ ವಿಚಿತ್ರ ವೇಷ?...ನಾನು ಉಡುವ ಚರ್ಮವನ್ನು ನೀನೇಕೆ ಕೈಯಲ್ಲಿ ಹಿಡಿದಿರುವೆ?"

"ವಿಚಿತ್ರವೇನಿಲ್ಲ ಸ್ವಾಮಿ. ಇದು ಕಾಲಕ್ಕೆ ತಕ್ಕಂತಹ ಉಡಿಗೆ ತೊಡಿಗೆ... ಇದು ಅವಕ್ಕೆ match ಆಗುವ ಕೈಚೀಲ...ನಾನುಟ್ಟಿರುವುದು ನೈಲಾನು..."

"ನೈಲಾನು? ಅದೇನು ಹಾಗೆಂದರೆ? ನಿನಗೆ ಉಡಲು ಸೀರೆಯಿಲ್ಲವೇನು? ನಿಮ್ಮ ತಂದೆ ಪರ್ವತರಾಜ ಪೆಟಾರಿ ತುಂಬಿ ಹೊರಿಸಿ ಕಳಿಸಿದ ಚೀನಾಂಬರಗಳೆಲ್ಲ ಹರಿದುಹೋದುವೇನು? ಮದುವೆಯಲ್ಲಿ ನಾನು ತಂದಿರಿಸಿದ ಬುಟ್ಟ ಬನಾರಸಿಯು ಕಟ್ಟು ಕಳೆದುಹೋದುವೇನು?"

" ಎಲ್ಲಾ ಇವೆ. ಆದರೆ ಅವೆಲ್ಲಾ ಹಳೆಯಫ್ಯಾಷನ್ನು—ಯಾರು ಉಡುತ್ತಾರೆ ? ಭೂಲೋಕದ ಲಲನಾಮಣಿಯರು ಉಡುವುದೇ ಇದನ್ನು. ಇವನ್ನು ಹೆಚ್ಚಿಗೆ ಒಗೆಯಬೇಕಾಗಿಲ್ಲ, ಒಗೆದರೂ ಹಿಂಡಬೇಕಾಗಿಲ್ಲ, ಇಸ್ತ್ರಿಯಂತೂ ಬೇಕೇ ಇಲ್ಲ—Dip-Dry ಅನ್ನುತ್ತಾರೆ ಇವುಗಳಿಗೆ. ಪಾಪ, ಭೂಲೋಕದ ಜನರಿಗೆ ಕುಡಿಯುವ ನೀರಿಗೇ ತಾಪತ್ರಯ, ಇಸ್ತ್ರಿಗೆ ದೋಭಿ ಸೀರೆಗೆ ಐವತ್ತು ಪೈಸೇ ಕೇಳುತ್ತಾನೆ: ಆರು ತಿಂಗಳಿಗೊಮ್ಮೆ ನೀರಲ್ಲಿ ಅದ್ದಿ ಆರಿಹಾಕಿದರಾಯಿತು......ಇದೋ ನೋಡಿ, ಭಕ್ತೆಯರು ಇವತ್ತು ನನಗೆ ಅರ್ಪಿಸಿರುವ ರವಿಕೆಗಳು—ಟೆರಿಲಿನ್, ನೈಲಾನ್, ಆರ್ಲಾನ್, ಮಾರ್ಲಾನ್, ನೈಲೆಕ್ಸ್!......ಇದು, ಕಪ್ಪುಹಣದ ಬಂಡವಾಳಗಾರನ ಹೆಂಡತಿ (ಪಾಪಪರಿಹಾರಕ್ಕೆ) ಕೊಟ್ಟಿರುವ ಸೀರೆ—ಇದನ್ನು ಡ್ರೇಲಾನ್ ಎಂದು ಕರೆಯುತ್ತಾರೆ!

" ಛೀ ! ಇದೇನು ಬಟ್ಟೆ ? ಕತ್ತರಿಸಿ ಷಣ್ಮುಖ ಗಣೇಶನ ಕೊರಡಿಯ ಬಾಗಿಲಿಗೆ ಪರದೆ ಹಾಕು ; ಅಥವಾ ಅವರು ಓದುವ ಮೇಜಿಗೆ ಹೊದ್ದಿಸು ..ಹುಂ ? ಈ ಬೆಳ್ಳಿ ಒಡವೆಗಳೇಕೆ ? ಬಂಗಾರ ವಜ್ರ ವೈಢೂರ್ಯಗಳೇನಾದವು ? ರಕ್ಕಸನಾವನಾದರೂ ಅಪಹರಿಸಿದನೇನು ?"

" ಇದೂ ಭೂಲೋಕದ ವ್ಯವಹಾರ. ಬಂಗಾರ ವಜ್ರ ಕೆಂಪುಗಳನ್ನು ಬ್ಯಾಂಕಿನ ಲಾಕರಿನಲ್ಲಿಟ್ಟು ಬಾಡಿಗೆ ತೆತ್ತು, ಬೆಳ್ಳಿಯದೋ ಕೃತಕಾಭರಣಗಳನ್ನೋ ಧರಿಸುವುದೇ ಅಲ್ಲಿನ ಆಚಾರ. "

" ಅದೆಲ್ಲ ಭೂಲೋಕದ ಮಾತಾಯ್ತು, ನಮಗೇಕೆ ಅವರ ಆಚಾರ ವ್ಯವಹಾರದ ಅನುಕರಣೆ ? ನಮ್ಮ ಎತ್ತುಗಳಿಗೆ ಹಾಕುವ ಈ ಒಡವೆಗಳನ್ನು ಮೊದಲು ತೆಗೆದು ಬಿಸಾಡು ; ಗಾಳಿಗೆ ಹಾರಿ ಹೋಗುವ ಈ ಸೀರೆಯನ್ನು ಬದಲಿಸಿ, ನನಗಿಷ್ಟವಾದ ನವಿಲುರಂಗಿನ ಜರತಾರಿ ಸೀರೆಯನ್ನುಟ್ಟು ಬಾ! "

ಪೂಜೆಯ ಧೂಪದೀಪದ ಕಾವೇರಿತ್ತೇನೋ ! ಪಾರ್ವತಿ ದುರ್ಗೆಯಾದಳು ; ಪರಮೇಶ್ವರನ ಮಾತಿಗೆ ಕಿವಿ ಕೊಡಲೇ ಇಲ್ಲ. ಕೋಪಾನ್ವಿತನಾದ ಆತ, ಟಿಫನ್ ಸಹ ತಿನ್ನದೆ, ಡಮರುಗ ಎತ್ತಿಕೊಂಡು ನಟರಾಜ ನೃತ್ಯಾಲಯದ ಕಡೆಗೆ ದಾವುಗಾಲು ಹಾಕುತ್ತಾ ನಡೆದ!...ರಾತ್ರಿಯವರೆಗೂ ಭೀಕರ ಮೌನ, ಶಿವಪಾರ್ವತಿಯರು ಊಟ ಮಾಡಲಿಲ್ಲ; ಹೆದರಿದ ಷಣ್ಮುಖ ಗಣಪತಿಯರು ಉಸುರೆತ್ತದೆ ಉಂಡು ಮಲಗಿದರು.

ಮೂರನೇ ದಿನ. ಹನ್ನೆರಡರ ಸಮಯ, ಗಣೇಶನ ಕೊಠಡಿಯಿಂದ ನರಳುವ ಸದ್ದು ಕೇಳಿಸಿತು. ತಾಯಿಕರುಳು—ಮುಸುಕಿಟ್ಟು ಮಲಗಿದ್ದ ಪಾರ್ವತಿ ಎದ್ದೋಡಿ ಬಂದಳು.

" ಏನಾಯ್ತಪ್ಪ ಕಂದಾ ? ಯಾಕೆ ಹೀಗೆ ಹಲುಬುತ್ತೀ ನನ್ನ ರಾಜ ?"

" ಹೊಟ್ಟೆ ನೋವಮ್ಮ. ತುಂಬ ನೋವು...!"

ಗಣೇಶನ ನರಳಾಟ ಹೆಚ್ಚಾಯಿತು. ಈಶ್ವರತಾನೇ ಎಷ್ಟು ಹೊತ್ತು ಸುಮ್ಮ ನಿದ್ದಾನು ? ಗಂಡ ಹೆಂಡಿರ ಜಗಳದಲ್ಲಿ ಕೂಸು ಬಡವಾಗದೆ ?...ಕೋಪಗೃಹಗವಿ ಯಿಂದ ಹೊರಕ್ಕೆ ಬಂದ.

"ಏನಾಯ್ತು ವಿನಾಯಕ ? ಯಾಕೆ ಅಳುವೆ ಮಗು ?"

"ಪೂಜೆ ಮಾಡಿಸಿಕೊಂಡು ಕಡುಬು ತಿಂದು ಬಂದಾಗಿನಿಂದ ಬಲು ಹೊಟ್ಟೆ ನೋವು ಅಪ್ಪ!.. ಯಾವ ವರ್ಷವೂ ನನಗೆ ಹೀಗಾಗುತ್ತಿರಲಿಲ್ಲ !"

ಬಾಗಿಲಬಳಿ ಇಣುಕಿ ನೋಡುತ್ತಿದ್ದ ಷಣ್ಮುಖ ಹೇಳಿದ—"ನಾರದರು ಈಗ ತಾನೆ ಬಂದಿದ್ದರು. ನೀವಿಬ್ಬರೂ ಮಾತಾಡಿಸುವಿರೋ, ಇಲ್ಲವೋ ಎಂದು ಹೊರಟು ಹೋದರು. ಅವರು ಹೇಳಿದರು—ಭೂಲೋಕದಲ್ಲಿ ಇವತ್ತು ಅಕ್ಕಳ್ಳು, ಅಮೆರಿಕ ಅಕ್ಕಿಯ ಕಡುಬಂತೆ. ತೆಂಗಿನಕಾಯಿ ಬೆಲೆ ಅಟ್ಟಕ್ಕೇರಿರುವುದರಿಂದ, ತೆಂಗಿನ ತುರಿ ಇಲ್ಲದೆಯೇ ನುಚ್ಚಿನ ಹೂರಣಮಾಡಿ ಕಡುಬಿನೊಳಗಿರಿಸಿದ್ದರಂತೆ !"

"ಹೌದೇ ? ಅದನ್ನು ತಿಂದ ನಮ್ಮ ಗಣಪನಿಗೆ ಹೊಟ್ಟೆ ನೋವು ಬರದೇ ಇನ್ನೇನಾಗುತ್ತೆ ?...ಯಾರಲ್ಲಿ ಕೂಡಲೇ ಧನ್ವಂತರಿಯನ್ನು ಕರೆತನ್ನಿ !"

ಸುಮ್ಮನೆ ನಿಂತಿದ್ದ ಪಾರ್ವತಿ ಮಾತನಾಡಿದಳು—

"ಧನ್ವಂತರಿಯಿಂದೇನಾದೀತು ? ಅವನಿಗೆ ಗೊತ್ತಿರುವುದು ಒಂದೇ ಲೇಹ, ಒಂದೇ ಭಸ್ಮ" ಅಮೃತಪಾನದ ಅಜೀರ್ಣಕ್ಕೆ ಮದ್ದು ಕೊಡಬಲ್ಲ, ಅಷ್ಟೆ !...ಈ ಹೊಟ್ಟೆನೋವಿಗೆ ಭೂಲೋಕದ ವೈದ್ಯರೇ ಆಗಬೇಕು. ಅಲ್ಲಿನ ವ್ಯಾಧಿಯನ್ನು ಅವರೇ ಗುಣಮಾಡಬಲ್ಲರು."

"ಹೌದು ಅಪ್ಪ. ಬಗೆ ಬಗೆ ಆಹಾರ ಜನರಿಗೆ ಕೊಡುವುದಕ್ಕೆ ತಕ್ಕಂತೆ, ಬಗೆ ಬಗೆ ಔಷಧಿಗಳನ್ನೂ ಕಂಡು ಹಿಡಿದಿದ್ದಾರಂತೆ. ರಸ್ತೆಗೆ ಆರು ಡಾಕ್ಟರು ಷಾಪುಗಳಿವೆ ಯಂತೆ ; ಎಲ್ಲಾ ಭರ್ತಿ ಯಾಗಿರುತ್ತಂತೆ !"

"ಹುಂ...ಹಾಗಾದರೆ ನಡೆಯಿರಿ, ಭೂಲೋಕಕ್ಕೇ ಹೋಗೋಣ."

"ಆದರೆ ಅಪ್ಪ, ಅಲ್ಲಿ ನಾಡಿ ಹಿಡಿದರೆ ಹತ್ತು, ನಾಲಿಗೆ ನೀಡಿಸಿದರೆ ಹದಿನೈದು, ನಡಿಗೆ ನೋಡಿದರೆ ಇಪ್ಪತ್ತು ಕೊಡಬೇಕಂತೆ ಡಾಕ್ಟರಿಗೆ !"

ಕೈಲಾಸದಲ್ಲಿ ಕಾಸೆಲ್ಲಿ ಬರಬೇಕು, ಬೂದಿ ಬುರುಡೆಗಳನ್ನು ಬಿಟ್ಟರೆ ?...ಕುಬೇ ರನಿಂದ ಸಾಲ ತೆಗೆದು ಹೊರಟರು.

ಎರಡು ಸೂಜಿ, ನಾಲ್ಕು ಗುಳಿಗೆಗೆ ಗಣೇಶನ ಹೊಟ್ಟೆ ನೋವು ಗುಣವಾಯಿತು. "ಭೂಲೋಕವನ್ನು ತೆಗಳಿದರಲ್ಲ, ಈಗ ನೋಡಿ !" ಎಂದು ಹಂಗಿಸಿದಳು ಶಿವನನ್ನು— ಗೌರೀದೇವಿ !

—ಟಿ. ಸುನಂದಮ್ಮ

ಕೊಂಡುಕೊಂಡು ಬಂದ್ಬಿಟ್ಟೆ

★

"ನೋಡಿ! ರಾಯರೇ! ಒಂದು ಪ್ಯಾಕೆಟ್ ಹೊಸ ಬ್ಲೇಡ್ ಕೊಂಡುಕೊಂಡು ಬಂದ್ಬಿಟ್ಟೆ, ಪೇಟೇಲಿ ಯಾವ ಅಂಗಡಿಯಲ್ಲೂ ಪೀಕಾಕ್ ಬ್ಲೇಡುಗಳು ಸಿಗುವುದೇ ಇಲ್ಲ. ಒಂದು ಸಂದಿ ಅಂಗಡಿಯಲ್ಲಿ ಎರಡು ಪ್ಯಾಕೆಟ್‌ಗಳಿದ್ದುವು. ಅಂಗಡಿಯವ ನನ್ನ ಸ್ನೇಹಿತ. ಅದಕ್ಕೇ ನನಗೊಂದು ಪ್ಯಾಕೆಟ್ ಮಾರಿದ. ಯಾರಿಗೂ ಹೇಳಬೇಡಿ, ಜನಕ್ಕೆ ತಿಳಿದರೆ ನಮ್ಮ ಅಂಗಡೀನ ಮುತ್ತಿಗೆ ಹಾಕಿಬಿಡ್ತಾರೆ ಎಂದು ಕೇಳಿಕೊಂಡ. ಅದಕ್ಕೇ ಯಾರಿಗೂ ಹೇಳಲೇ ಇಲ್ಲ. ಬೇಕಾದರೆ ನಿಮಗೆ ಒಂದು ಬ್ಲೇಡ್ ಕೊಡ್ತೀನಿ. ಪರೀಕ್ಷೆಮಾಡಿ ನೋಡಿ" ಎಂದು ಬೆಳಿಗ್ಗೆ ರಾಮಚಂದ್ರರಾಯರು ಲಕ್ಷ್ಮಣರಾಯನಿಗೆ ಹೇಳಿದನು.

ಆ ಬ್ಲೇಡನ್ನು ಪುಕಟ್ಟು ಪಡೆದ ಲಕ್ಷ್ಮಣರಾಯರು, ಹದಿನೈದು ದಿನಗಳು ಅದರಲ್ಲೇ ಸ್ವಯಂ ಹಜಾಮತಿ ಮಾಡಿಕೊಂಡರು. "ಪರವಾಗಿಲ್ಲವಲ್ಲ ಇದು ಆರೈಕೆ ಮಾಡದೇನೆ ಈ ಬ್ಲೇಡು ಹದಿನೈದು ದಿನ ಒದಗಿ ಬಂತು. ಸ್ವಲ್ಪ ಪಾಲೀಷ್ ಮಾಡಿ ಉಪಯೋಗಿಸಿದರೆ ಒಂದು ತಿಂಗಳು ನಡೆಯಬಹುದು ಎಂದು ಅಂದುಕೊಂಡರು,

ಮೂರು ನಾಲ್ಕು ವಾರಗಳಾಗಿರಬಹುದು. ತಿರುಗಿ ರಾಮಚಂದ್ರರಾಯರು ಭೇಟಿಯಾದರು. ಲಕ್ಷ್ಮಣರಾಯರನ್ನು. "ಆ ಬ್ಲೇಡ್ ಉಪಯೋಗಿಸಿದಿರಾ? ನಿಮ್ಮ ಅಭಿಪ್ರಾಯ ಏನು" ಎಂದು ಕುಶಲಪ್ರಶ್ನೆ ಹಾಕಿದರು. "ಹೀಗೆ ೧೫ ದಿನ ಸುಖ ಹಜಾಮತ್ತು ಸಾಧ್ಯವಾಯಿತು." ಎಂದರು ಲಕ್ಷ್ಮಣರಾಯರು.

"ಹಾಗಾದರೆ ಈ ಬ್ಲೇಡ್ ಉಪಯೋಗಿಸಿ ನೋಡಿ. ಸ್ವೀಡನ್ನಿನಲ್ಲಿ ತಯಾರಾದ್ದು, ಹೊರದೇಶದಿಂದ ಬಂದವರು ನಾಲ್ಕು ಪ್ಯಾಕೆಟ್ ತಂದಿದ್ದರು. ನನಗೊಂದೆರಡು ಕೊಟ್ಟರು. ಏಂಜೆಲ್ ಬ್ಲೇಡ್ ಎಂದರೆ ಜಗದ್ವಿಖ್ಯಾತ. ನಮ್ಮ ದೇಶದಲ್ಲಿ ಸಿಗೋದೇ ಇಲ್ಲ." ಎಂದರು ರಾಮಚಂದ್ರರಾಯರು. ಪುಕಟ್ಟು ದೊರೆತರೆ ಚಿಕ್ಕಪ್ಪನ ಮುಖವನ್ನೂ ಬೋಳಿಸ್ತೀನಿ ಎನ್ನುವ ಜಾಯಮಾನ ಲಕ್ಷ್ಮಣರಾಯರದ್ದು. ಒಪ್ಪಿ ಒಂದು ಬ್ಲೇಡ್ ಏಂಜೆಲ್ ಗಿಟ್ಟಿಸಿದರು. ಅದರಲ್ಲೂ ಹದಿನೈದು ನುಣ್ಣನೆ ಹಜಾಮತಿ ಮುಖಕ್ಕಾಯಿತು.

ಮೂರು ನಾಲ್ಕು ದಿನಗಳಿರಬಹುದು. ತಿರುಗಿ ಬಂದರು ರಾಮಚಂದ್ರ ರಾಯರು. "ಈ ಬ್ಲೇಡ್ ಟ್ರೈಮಾಡಿ ರಾಯರೇ, ಜರ್ಮನಿಯಲ್ಲಿ ಎಲ್ಲರೂ

ಇದನ್ನೇ ಉಪಯೋಗಿಸುತ್ತಾರಂತೆ. ಜರ್ಮನ್ ಸಿಲ್ವರ್‌ನಲ್ಲೇ ತಯಾರಿಸಿದ್ದು. ಮುಕ್ಕಿಲ್ಲ. ತುಕ್ಕು ಹಿಡಿಯುಲ್ಲ. ಅದನ್ನು ಒರೆಸಬಾರದು. ನೆಲ್ಲಿ ಕೆಳಗೆ ಹಿಡಿದು ಜರ್ರಂತ ನೀರು ತಿರುಗಿಸಿದರೆ ಬ್ಲೇಡ್ ಶುದ್ಧವಾಗುತ್ತೆ, ಆ ಒದ್ದೆ ಬ್ಲೇಡನ್ನೇ ಹಾಗೇ ರೇಜರಿನಲ್ಲಿಡಬೇಕು. ಬ್ಲೇಡಿನ ಅಂಚು ಬಲು ಪವಿತ್ರ. ಅದನ್ನು ಮುಟ್ಟಲೇ ಬಾರದು. ಮುಲ್ಲರ್ ಬ್ಲೇಡ್ ಅಂದರೆ ಕರಡಿಗಳೂ ಕ್ಷೌರಕ್ಕೆ ಅಣಿಯಾಗಿ ನಿಲ್ಲುತ್ತ ವಂತೆ. ಹಾಗೆ ಜಾಹೀರಾತು ಮಾಡಿದ್ದಾರೆ" ಎಂದರು.

"ನೀವು ಹೋದ ಸಲ ಕೊಟ್ಟಿರಲ್ಲ! ಏಂಜೆಲ್ ಬ್ಲೇಡು. ಅದನ್ನ ಉಪ ಯೋಗಿಸುಕ್ಕೆ ಶುರುಮಾಡಿ ನಾಲ್ಕು ದಿನಗಳಾಯ್ತು. ಇನ್ನು ಹತ್ತು ಹನ್ನೊಂದು ದಿನ ಅದೇ ಬಳಕೆಗೆ ಬರುತ್ತದೆ. ಅದಕ್ಕಿಂತ ಇದು ವಾಸಿ ಅಂತೀರಾ" ಎಂದರು ಲಕ್ಷ್ಮಣರಾಯರು.

"ಮುಲ್ಲರ್ ಬ್ಲೇಡ್ ಒಂದನ್ನು ನಿಮಗೆ ಕೊಟ್ಟು ಪ್ರಯೋಗ ನಡೆಸಿ ಅಂತ ಹೇಳುಕ್ಕೆ ಬಂದೆ. ಪಾಂಡಿಚೆರಿಯಲ್ಲಿ ಸುಂಕದವರು, ಪ್ರಯಾಣಿಕನೊಬ್ಬನನ್ನು ಕಳ್ಳ ಸಾಗಾಣಿಕೆ ಮಾಡುತ್ತಿದ್ದಾಗ ಹಿಡಿದರು. ಅವನ ಹತ್ತಿರ ೧೦೦ ಪ್ಯಾಕೆಟ್ ಮುಲ್ಲರ್ ಬ್ಲೇಡುಗಳಿದ್ದವು. ಮುಟ್ಟುಗೋಲು ಹಾಕಿದರು. ಆ ಮೇಲೆ ಹರಾಜು ಹಾಕಿ ದರು. ನನ್ನ ಸ್ನೇಹಿತ ಪಾರೀಖ್ ಛಡ್ ಸವಾಲಿನಲ್ಲಿ ಕೊಂಡುಕೊಂಡ, ಬಹಿರಂಗ ವಾಗಿ ಮಾರುತ್ತಾ ಇದಾನೆ. ಏಂಜಲ್ ಬ್ಲೇಡ್ ತಪಾಸ್ ಮಾಡಿದನಂತರ ಇದನ್ನು ಪ್ರಯೋಗಕ್ಕೆ ತೆಗೆದುಕೊಳ್ಳಿ" ಎಂದರು ರಾಮಚಂದ್ರರಾಯರು.

"ಅದರೆ ನೀವೆಷ್ಟು ಪ್ಯಾಕೆಟ್ ಕೊಂಡಿರಿ, ಪಾರೀಖ್‌ನಿಂದ" ಎಂದು ಕುತೂಹಲ ದಿಂದ ಲಕ್ಷ್ಮಣರಾಯರು ಕೇಳಿದರು.

"ಹತ್ತು ಪ್ಯಾಕೆಟ್ ನನಗೆ ಪಾರಿಖ್ ಮಾರಿದ. ಒಂದೊಂದು ಪ್ಯಾಕೆಟ್‌ನಲ್ಲೂ ಹತ್ತು ಹತ್ತು ಬ್ಲೇಡುಗಳಿವೆ" ಎಂದರು ರಾಮಚಂದ್ರರಾಯರು.

ಎರಡು ವಾರಗಳಾಗಿರಬಹುದು. ಲಕ್ಷ್ಮಣರಾಯರನ್ನು ತಿರುಗಿ ಭೇಟಿಯಾದಾಗ ರಾಮಚಂದ್ರರಾಯರು ವಿಲ್ಕಿ ಬ್ಲೇಡೊಂದನ್ನು ಅವರ ಕೈಲಿಟ್ಟರು. ಇಂಗ್ಲೆಂಡಿನಲ್ಲಿ ಈ ಉಕ್ಕಿನಿಂದಲೇ ಕತ್ತಿಗಳನ್ನು ಮಾಡುತ್ತಾರಂತೆ. ಅಸಾಧ್ಯ ಬಾಳಿಕೆ, ನನ್ನ ಸ್ನೇಹಿತ ಒಬ್ಬ ತಂದುಕೊಟ್ಟ ಒಂದು ನಾಲ್ಕು ಪ್ಯಾಕೆಟನ್ನ. ಇದನ್ನು ಟ್ರೈಮಾಡಿ ಹೇಗಿದೆ ಹೇಳಿ" ಎಂದು ಹೇಳಿದರು.

ಲಕ್ಷ್ಮಣರಾಯರು ಲೆಕ್ಕ ಹಾಕಿದರು. ಪೀಕಾಕ್ ಬ್ಲೇಡು ಒಂಬತ್ತು. ಏಂಜಲ್ ಬ್ಲೇಡು ಹತ್ತೊಂಬತ್ತು. ಮುಲ್ಲರ್ ಬ್ಲೇಡ್ ತೊಂಬತೊಂಭತ್ತು. ವಿಲ್ಕಿ ಬ್ಲೇಡು ಗಳು ಹತ್ತೊಂಭತ್ತು. ಒಟ್ಟು ೧೪೬ ಬ್ಲೇಡುಗಳು ರಾಮಚಂದ್ರರಾಯರ ಹತ್ತಿರ

ಇರಬೇಕು. ಮಿಕ್ಕ ನಾಲಕ್ಕನ್ನು ನನಗೆ ಪ್ರಯೋಗಾರ್ಥ ಕೊಟ್ಟಿದ್ದಾರೆ. ಒಂದು ಬ್ಲೇಡು ೧೦ ದಿನವಾದರೂ ಉಪಯೋಗಕ್ಕೆ ಬಂದೇ ಬರುತ್ತೆ. ಅಂದರೆ ೧೪೬೦ ದಿನ ಹಜಾಮತಿ ಆಗಬಹುದು. ಅಂದರೆ ನಾಲ್ಕು ವರ್ಷ ಬ್ಲೇಡ್ ಕೊಳ್ಳಬೇಕಾಗಿಲ್ಲ ಅವ. ಎಂದು ಯೋಚನೆ ಮಾಡಿದರು.

"ರಾಮಚಂದ್ರರಾಯ, ನಿನಗೀಗ ೬೬ ವರ್ಷದ ಪ್ರಾಯ. ಆಗಲೇ ಕೈ ನಡುಗುಕ್ಕೆ ಶುರುವಾಗಿದೆ. ಕನ್ನಡಕ ಇಲ್ಲದೆ ಇದ್ದರೆ ಕಣ್ಣು ಸರಿಯಾಗಿ ಕಾಣಿಸಲ್ಲ. ಬ್ಲೇಡ್ ಎಷ್ಟೋ ಚೆನ್ನಾಗಿದ್ದರೂ ಕೈ ನಡುಗುತ್ತ ಇದ್ದರೆ ಮುಖಕ್ಕೆ ತೋಪಡ ಹೊಡೆದ ಹಾಗೆ ಆಗುತ್ತೆ. ಅಲ್ಲದೆ ಕನ್ನಡಕ ಹಾಕಿಕೊಂಡು ಕ್ಷೌರ ಮಾಡಿಕೊಳ್ಳಲು ಕಷ್ಟ. ಕಣ್ಣು ಸರಿಯಾಗಿ ಕಾಣಿಸದೆ ಇರೋವಾಗ ಮುಖಕ್ಷೌರ ಮಾಡಿಕೊಂಡರೂ ಅಲ್ಲಲ್ಲೇ ಕೂದಲಗಡ್ಡೆಗಳು ಮುಖದ ಮೇಲೆ ಉಳಿದೇ ಉಳಿಯುತ್ತವೆ. ಅಂದ ಮೇಲೆ ಯಾವ ಬ್ಲೇಡಾದರೇನು ? ಇಷ್ಟೆಲ್ಲಾ ಕಷ್ಟಪಟ್ಟು ಅಂಗಡಿ ಮುಂಗಟ್ಟು ಸುತ್ತಿ ಯಾಕೆ ಕೊಂಡು ಕೊಂಡು ಬಂದೆ." ಎಂದು ನಯವಾಗಿ ವಿನಯದಿಂದ ಕೇಳಿಯೇಬಿಟ್ಟ.

"ನೀನು ಹೇಳೋದೇನೋ ವಾಸ್ತವ, ಲಕ್ಷ್ಮಣರಾಯ. ಆದರೆ ನಾನು ಕೊಂಡುಕೊಳ್ಳದೆ ಇದ್ದರೆ ಇನ್ನು ಯಾರಾದರೂ ಕೊಂಡುಕೊಂಡು ಬಿಡ್ತಾರಲ್ಲ. ಆವಾಗ ನನ್ನ ಪಾಡು ? ಅದಕ್ಕೇ ಕೊಂಡುಕೊಂಡುಬಿಟ್ಟೆ" ಎಂದು ಕಾರಣಗಳನ್ನು ರಾಮಚಂದ್ರರಾಯರು ಕೊಟ್ಟರು.

"ತ್ರೇತಾಯುಗದಲ್ಲಿ ಏನಾದರೂ ಇಷ್ಟು ಬ್ಲೇಡುಗಳು ನಮ್ಮ ಕೈಲಿ ಸಿಕ್ಕಿದ್ದರೆ, ಶೂರ್ಪನಖಿಯಮೇಲೆ ಪ್ರಯೋಗ ಮಾಡಬಹುದಾಗಿತ್ತು, ನಾವು" ಎಂದು ದನಿಗೂಡಿಸಿದರು ಲಕ್ಷ್ಮಣರಾಯರು.

—ಬಚ್ಚ

ಡಯಾಮೀಟರ್

ಕಾಲೇಜು ಹುಡುಗರಿಗೆ ರೈಫಲ್ ಕವಾಯಿತು ಕಲಿಸುತ್ತಿದ್ದ. ಶಿಕ್ಷಕ "ಇದು ರೈಫಲ್ ಅಂತ. ಈ ತೂತಿನಲ್ಲೇ ಗುಂಡು ಹಾರೋದು. ರೈಫಲ್ ತೂತಿನ ಸರ್‌ಕಮ್‌ಸ್ಟಾನ್ಸ್ ಅಂದರೆ ಡಯಾಮೀಟರು, ಗುಂಡಿನ ಸರಕಮ್‌ಸ್ಟಾನ್ಸ್ ಅಂದರೆ ಡಯಾಮೀಟರಿಗಿಂತ ಸ್ವಲ್ಪ ದೊಡ್ಡದು. ೨.೨ ಅದು ತಿಳೀತಾ!" ಎಂದು ಕಲಿಸುತ್ತಿದ್ದ : ರೈಫಲ್ ಮತ್ತು ಗುಂಡುಗಳನ್ನು ತೋರಿಸಿ.

"ಸಾರ್ ೨.೨ ಸೆಂಟಿ ಮೀಟರೋ, ಮಿಲಿಮೀಟರೋ" ಎಂದೊಬ್ಬ ಹಸಿ ಸಿಪಾಯಿ ಪ್ರಶ್ನೆ ಕೇಳಿದ.

"ಸೆಂಟಿ ಮೀಟರೂ ಅಲ್ಲ, ಮಿಲಿಮೀಟರೂ ಅಲ್ಲ, ಅದು ಡಯಾಮೀಟರ್" ಎಂದು ಶಿಕ್ಷಕ ಹೆಮ್ಮೆಯಿಂದ ಹೇಳಿದ.

—ನಾರಾಯಣ

ಬಾಯಿಲ್ಲದವರು

“ನರಕ ಶಿಕ್ಷೆ ಕೊಡ್ತೀವಿ ನಿಮಗೆ” ಅಂತ ಬಾಯಿಲ್ಲದವರನ್ನು ಹೆದರಿಸಿದರು, ಕ್ರೂರಿಗಳು.

ಜುಟ್ಟು ಹಿಡಿದು ಎಲ್ಲರನ್ನೂ ಬರ ಬರ ಸೆಳೆದು ತಂದರು.

ಬಟ್ಟೆ ಎಲ್ಲಾ ಬಿಚ್ಚಿಸಿ ಬೆತ್ತಲೆ ಕೂಡು ಹಾಕಿದರು.

ಕಲ್ಲಂಗಾಣಕ್ಕೆ ಕೊಟ್ಟು ಚನ್ನಾಗಿ ಅರೆಸಿದರು. ಮೈಯೆಲ್ಲಾ ಪಾಪ ಪುಡಿ ಪುಡಿಯಾದಂತಾಯಿತು. ಕಣ ಕಣ ಬಿಟ್ಟು ಕಂಗೆಟ್ಟವು ಖೈದಿಸಮೂಹ.

“ಅಯ್ಯೋ! ಸತ್ತೇ ಹೋಗುತ್ತವೆಯೋ” ಎಂದು ಶಿಕ್ಷಾಧಿಕಾರಿಗಳು ತುಸು ಬೆದರಿದರು. ಆದ್ದರಿಂದ ನೀರು ತಟ್ಟಿದರು. ಮೈತಲೆಯೆಲ್ಲಾ ತಂಪಾಗಲಿ ಅಂತ.

“ಪಾಪ! ಇಷ್ಟು ಕಷ್ಟಕೊಟ್ಟರೂ, ಕರುಣೆಯೂ ಇದೆಯಲ್ಲ ಇವರ ಎದೆಯಲ್ಲಿ ಅಂತ, ಕಲ್ಲಂಗಾಣಕ್ಕೆ ಬಿದ್ದು ನರಳಿದವರು, ಮುದ್ದೆ ಮುದ್ದೆಯಾದರು.

ಇದನ್ನು ಕಂಡು ಶಿಕ್ಷಾಧಿಕಾರಿಗಳು ಲಟ್ಟಣಿಗೆ ಹಿಡಿದು ಬಂದರು.

ಹಸಿಮಣೆ ಹಾಕಿ ಇವರನ್ನ ಲಟ್ಟಣಿಗೆಯಿಂದ ಲಡ ಲಡ ಲಟ್ಟಿಸಿದರು.

ತಿರುಗಾ ಮುರುಗಾ ಹಾಕಿ ಥಳಿಸಿದರು. ಗಾಯ ಬಿದ್ದಲ್ಲಿ ಎಣ್ಣೆ ಸವರಿದರು.

ತಿರುಗಿ ಒತ್ತಿ ಒತ್ತಿ ಹಪ್ಪಳಮಾಡಿದರು.

ಮುಗಿಯಿತು ಶಿಕ್ಷೆ ಅಂತೀರಾ ಇಲ್ಲ.

ಬಾಂಡ್ಲೆಗಳಲ್ಲಿ ಎಣ್ಣೆ ಕುದಿಯುತ್ತಿತ್ತು. ಸಳಮಳ ಕುದಿಯುತ್ತಿತ್ತು.

ಅದರ ಝಳ ಮೂರು ಮಾರು ದೂರ ಕಾಣಿಸುತ್ತಿತ್ತು.

ಕಾದ ಎಣ್ಣೆಯಲ್ಲಿ ಧಪ್ಪಂತ ಮುಳುಗಿಸಿದರು.

ಮೈ ಬೆಂದುಹೋಯಿತು. ಬೊಬ್ಬೆಗಳು ಎಲ್ಲೆಲ್ಲೂ ಎದ್ದುವು.

ಅಷ್ಟಕ್ಕೆ ಶಿಕ್ಷಾಧಿಕಾರಿಗಳಿಗೆ ಸಂತೋಷವಾಯಿತು ಅಂತೀರಾ? ಇಲ್ಲ.

ರಾಕ್ಷಸರನ್ನು ಕರೆಸಿದರು. “ಇವರನ್ನು ತಿನ್ನಿ” ಎಂದರು.

ಬಿಸಿ ಬಿಸಿಯಾಗಿರುವಾಗಲೇ ತಿಂದುಬಿಡಿ ಎಂದರು.

ರಾಕ್ಷಸರು ತಿನ್ನುಕ್ಕೆ ಶುರು ಮಾಡಿದರು.

* * * *

ಒಬ್ಬ ರಾಕ್ಷಸ ಕೇಳಿದ. ಸ್ವಲ್ಪ ಸಕ್ಕರೆ ಹಾಕಮ್ಮ, ತಿನ್ನುಕ್ಕೆ ಪೂರಿ ಬಲು ರುಚಿಯಾಗಿದೆ ಎಂದು.

“ಆಗಲಿ ನನ್ನ ಕಂದ” ಅಂತ ತಾಯಿ ಪೂರಿ ಮೇಲೆ ಸಕ್ಕರೆ ಉದುರಿಸಿದಳು.

ವಿಚಾರ ವಿನಿಮಯ

(ರಾಜೀವಪುರದಲ್ಲಿ)

ಸ್ವತಃ ರಾಜ್ಯಪಾಲರೇ ಕೈಗೆ ಪೊರಕೆ ತೆಗೆದುಕೊಂಡರೆ ದ್ವಾರಪಾಲಕರು, ದಿಕ್ಪಾಲಕರು ಸುಮ್ಮನೆ ಕೂರುಕ್ಕೆ ಆಗುತ್ತದೆಯೇ? ಮುಂದಿನ ಬೆಳೆಗೆ (?) ಭೂಮಿನ ಹಸನು ಮಾಡಬೇಡವೇ...ಯಥಾಶಕ್ತಿ ಕಸಕಡ್ಡಿ ಗುಡಿಸೇಬಿಡೋಣ ಅಂತ ಅವರೂ ಕಿರುನಗೆಯನ್ನು ಸೂಸುತ್ತ ಉದ್ದುದ್ದನೆ ಪೊರಕೆಗಳನ್ನು ಹಿಡಿದುಕೊಂಡರು. ಪುರಸಭೆಯ ಸುಬ್ಬಣ್ಣನೂ ಕೋಟಿನ ಬಟನ್ ಹೋಲಿಗೆ ಚೆಂಡು ಹೂವನ್ನು ಸಿಕ್ಕಿಸಿಕೊಂಡು ಗುಡಿಸುವುದಕ್ಕೆ ಸಿದ್ಧವಾದನು. ಸುಬ್ಬಣ್ಣನೇ ಮುಂದಿನ ವರ್ಷವೂ ಎಲ್ಲಿ ಅಧ್ಯಕ್ಷನಾಗಿ ಉಳಿದುಬಿಡುತ್ತಾನೋ ಈ ಗುಡಿಸೋ ಅವಾಂತರದಲ್ಲಿ ಅಂತ ಚಂದ್ರಪ್ಪನೂ ಧಾವಿಸಿಬಂದನು ಕಾಯಕಮಾಡೋಕೆ! ಆಡಳಿತ ನಡೆಸೋವ್ರು ಪೊರಕೆ ಹಿಡಿದುಕೊಂಡರೆ ವಿರೋಧ ಪಕ್ಷದವರು ಬಿಡ್ತಾರ್ಯೆ? ಅವರೂ ಪೊರಕೆಗಳನ್ನು ಹಿಡಿದುಕೊಂಡು ಬಂದರು. ಟೈಪಿಸ್ಟ್ ಅಂಡಳಮ್ಮನೂ ಬಂದಳು! ಸೊಗಸಾದ ಜಾರ್ಜೆಟ್ ಸೀರೆ ಉಟ್ಟು ತುಟಿಗೆ ರಂಗು ಬಳಿದು ಸೇವೆಗೆ ಬಂದಿದ್ದಳು ಆಕೆ. ಅವಳಿಗೆ ಆ ಉದ್ದನೆಯ ಪೊರಕೆ ಹಿಡಿದುಕೊಂಡು ಬಳುಕುತ್ತ ಗುಡಿಸುವುದು ನೈಟ್ ಕ್ಲಬ್‌ಗಳಲ್ಲಿ, ಮೋಹಿಸಿದವನೊಂದಿಗೆ ಕುಣಿದಷ್ಟು ಮೋಜು! ಇಷ್ಟೆಲ್ಲ ಸಿದ್ಧವಾಗೋ ಹೊತ್ತಿಗೆ ಪುರಸಭೆಯ ಇಂಜಿನಿಯರೂ ಬಂದನು. ಕಮಿಷನರೂ ಬಂದನು. ಡಾಕ್ಟರೂ ಬಂದರು ಕೈಗೆ ರಬ್ಬರ್ ಗ್ಲೌಸ್ ಹಾಕ್ಕೊಂಡು! ಲಾಯರೂ ಬಂದನು ಪೊರಕೆ ಆಡಿಸುತ್ತ. ಸೇವೆ ಅಂದ್ರೆ ಯಾರಿಗೆ ಬೇಡ. ಎಲ್ಲರಿಗೂ ಗೊತ್ತು. ಧಣಿಜೊತೇಲಿ ಇದ್ದಷ್ಟು ಹೊತ್ತು... ಬಗ್ಗಿ ಗುಡಿಸಿದಷ್ಟೂ ಲಾಭ ಅಂತ! ಎಂಥ ಸೊಗಸಾದ ದೃಶ್ಯ ಅಂತೀರಿ! ಎಷ್ಟು ನವಿರಾದ ಪೊರಕೆಗಳು! ಅವರೆಲ್ಲಾ ಸಾಲಾಗಿ ನಿಂತಾಗ ಕ್ಯಾಮರಾಗಳು ಕ್ಲಿಕ್ ಆಗುತ್ತಿದ್ದರೆ ನನ್ನ ಬಾಯಲ್ಲೂ ನೀರೂರಿತು! ಪೊರಕೆ ತೊಗೊಂಡು ಗ್ರೂಪಿಗೆ ಸೇರಿಬಿಡೋಣವೆ ಅಂದರೆ...ವಿಷಯ ಗೊತ್ತಾದರೆ ಮನೆಯಲ್ಲಿ ತಾನು ಏರಡು ಗಂಡಾಂತರಕ್ಕೆ ಸಿಕ್ಕಿಕೊಳ್ಳಬೇಕಾಗುತ್ತಿತ್ತು. ಒಂದು ಮನೆಯಾಕೆಯೇ ಪೊರಕೆಯನ್ನು ಕೈಗೆ ತೆಗೆದುಕೊಳ್ಳಬಹುದು....ಇಲ್ಲ. ಅದೇ ಪೊರಕೆಯನ್ನು ನನಗೆ ಕೊಟ್ಟು ಬೀದಿ ಗುಡಿಸೋಕೆ ಹೋಗ್ತೀರಿ? ಮನೇನ ಚೊಕ್ಕಟ ಮಾಡಬಾರ್ದೆ.. ರ್ಘಾದಿಸಿ, ಅಂತ ಅನ್ನಬಹುದು! ದೇವರ ದಯೆಯಿಂದ ಅವತ್ತು ದೇಶಸೇವೆಯನ್ನು ಮಾಡುವ ಯೋಗ್ಯನ

ಹಾಗೆ ಮನೇಗೆ ಬಂದೆ! ಇದೆಲ್ಲ ನೀವೇ ಪತ್ರಿಕೇಲಿ ಓದಿ ತಿಳಿದುಕೊಂಡಿದ್ದೀರಿ. ನಾನು ಯಾಕೆ ಹೇಳುವುದಕ್ಕೆ ಬಂದೆ ಎಂದರೆ...

ಮಾರನೇ ದಿವಸ, ಶಾಂತಿಸಮ್ಮೇಳನವನ್ನು ಮುಗಿಸಿಕೊಂಡು ಅಮೇರಿಕ ದೇಶದ ಪ್ರವಾಸಿಗಳಾದ ವೃದ್ಧದಂಪತಿಗಳೊಬ್ಬರು ಮೊದಲೇ ಗೊತ್ತುಪಡಿಸಿದ ಕಾರ್ಯಕ್ರಮ ದಂತೆ ನಮ್ಮ ಮನೇಗೆ ಬಂದಿದ್ದರು. ಉಪಹಾರದ ಉಪಚಾರಗಳೆಲ್ಲ ಆಯ್ತು. ಮೇಜಿನ ಮೇಲಿದ್ದ ಸ್ಥಳೀಯ ಪತ್ರಿಕೆಯನ್ನು ನೋಡುತ್ತಾ ಅವರೂರಿನ ಪತ್ರಿಕೆಗಳಿಗೆ ಹೋಲಿಸಿಕೊಳ್ಳುತ್ತಾ ಇದ್ದರು, ಆ ಪತ್ರಿಕೆಯ ಮುಖಪುಟದಲ್ಲೇ ಹಿಂದಿನದಿನದ ರಾಜೀವಪುರದ ಗುಡಿಸುವವರ ಗ್ರೂಪ್‌ಫೋಟೋ ಅಗಲವಾಗಿ ಅಚ್ಚಾಗಿತ್ತು. ಕಣ್ಣಿಗೆ ದೃಷ್ಟಿ ಬಡಿಯುವಂತಿತ್ತು! ಆ ವಿದೇಶಿ ದಂಪತಿಗಳ ದೃಷ್ಟಿಯೂ ಆ ಫೋಟೋ ಮೇಲೆ ಬಿತ್ತು. ಅವರು ಕೇಳಿದರು.

"What is this picture" ಅಂತ.

ನಾನು ಮೊಗುಮ್ಮಾಗಿ "City Cleaning" ಎಂದೆ. ದಂಪತಿಗಳಿಬ್ಬರೂ ಹುಬ್ಬು ಹಾರಿಸುತ್ತಾ "Fine, Fine" ಎಂದರು: ಅಲ್ಲಿ ಗುಡಿಸುತ್ತಿದ್ದವರ ಸೊಗಸಾದ ವೇಷಭೂಷಣಗಳನ್ನು ನೋಡಿ ಆತ ಹೆಂಡತಿಗೆ ಗಟ್ಟಿಯಾಗಿ ಹೇಳುವಂತೆ ಹೇಳಿದ "Very fine uniforms are provided to scavengers" ಅಂತ. ಕೊಟ್ಟ ಕೈ ನನಗೇನೆ ಎಂದುಕೊಂಡೆ ಕನ್ನಡದಲ್ಲಿ ಗಟ್ಟಿಯಾಗೇನೇ! ಮತ್ತೆ ನನ್ನ ಕಡೇಗೆ ತಿರುಗಿ ಕಿವಿಗಳನ್ನು ನಿಮಿರಿಸಿದರು ಇಬ್ಬರೂ ಏನು ಹೇಳುತ್ತಾನೋ ಕೇಳೋಣ ಅಂತ, ನಾನು ಏನು ಹೇಳಲಿ? ನಮ್ಮ ದೇಶದ ಬಡತನಾನ ಹೇಳಿಕೊ ಳ್ಳಲೆ...ನನಗೆ ಅದೂ ಅಭ್ಯಾಸವಿಲ್ಲ. ಪಕ್ಕದ ಮನೆಯವರ ಮುಂದೆ ಮೆರೆಯೋದೇ ನನಗೆ ಇಷ್ಟ, ಹೇಳಿದೆ. "on special occassions gabardine suits are provided" ಅಂತ,

ಅವರು ಅಲ್ಲಿಗೆ ಬಿಡಲಿಲ್ಲ, ಬೇರೆ ಏನಾದರೂ ಮಾತು ತೆಗೆಯೋಕೂ ಅವರು ಅವಕಾಶ ಕೊಡಲಿಲ್ಲ.

"how much you pay to each Scavanger here" ಎಂದು ಕೇಳಿದರು ಅವರು. "From Two Thousand to Three Thousand Rupees per month" ಎಂದೆ,

"Government pay?" ಎಂದರು ಪ್ರಶ್ನೆ ಕೇಳುವ ಹಾಗೆ!

"Partly" ಎಂದೆ ನಾನು

"Deficit" ಎಂದರು ಅವರು.

" will you make good by private sector " ಎಂದೆ ನಾನು.

" O, you mean Industry " ಎಂದರು ಅವರು.

" No, I mean public service " ಎಂದೆ ನಾನು.

" What " ಎಂದರು ಅವರು.

" Why ? " ಎಂದೆ ನಾನು.

" No country would spend so much for removing dirt " ಎಂದರು ಅವರು.

" It depends upon the dirt " ಎಂದೆ ನಾನು.

" Why then you create so much dirt and spend so much to remove it " ಎಂದು ಕೇಳಿದರು ಅವರು.

" Work is our motto " ಎಂದೆ ನಾನು.

" Money is available in plenty " ಎಂದೆ ನಾನು.

" You mean loan " ಎಂದರು ಅವರು.

ತಕ್ಷಣ ನನಗೆ ಚೇಳು ಕುಟುಕಿದಹಾಗಾಯ್ತು. ಮರು ಜವಾಬು ಕೊಡೋಕೆ ಆಗಲೇ ಇಲ್ಲ. ಮುಂದುಗಡೆ ಇದ್ದ ನಿಲುಗನ್ನಡಿಯಲ್ಲಿ ಮುಖ ಕಾಣುತ್ತಿತ್ತು. ಹೇಗಿತ್ತು ಗೊತ್ತೇ ? ಮ್ಯಾರಿನರ್—IV ಭೂಮಿಗೆ ಕಳಿಸಿದ ಮೂರನೇ ಚಿತ್ರದ ಹಾಗಿತ್ತು...ಬರೀ ಗೆರೆಗೆರೆ ! ಅದಕ್ಕೆ ಇರಬೇಕು ಆ ವಿದೇಶಿ ದಂಪತಿಗಳು ನನ್ನ ಮುಖಾನ ನೋಡಿ ಹಾಗೇ ಮೈ ಮರೆಯುತ್ತಾ ಇದ್ದಿದ್ದು ! " This is yet to explain " ಎಂದುಕೊಂಡಿರಬೇಕು ಅವರು !

—ಹಾ. ರಾ.

ವಿಚಿತ್ರ ಚೋರ

ಕ್ರೈಂಬ್ರಾಂಚ್ ಸಬ್ ಇನ್ಸ್‌ಪೆಕ್ಟರ್ ದೊಂಗಣ್ಣ ಬಾಬುಗಳು ಕಾಲುಚಾಚಿ ಪಲ್ಲಂಗದಮೇಲೆ ಪವಡಿಸಿದ್ದರು. ಮಧ್ಯಾಹ್ನದ ರಣಬಿಸಿಲು ಹೊರಗೆ ಸುಡುತ್ತಿತ್ತು, ನಿದ್ರಾದೇವಿ ಅವರನ್ನು ಆಲಂಗಿಸಿಕೊಳ್ಳುತ್ತಿರುವಳೋ ಎಂಬಂತೆ ಅವರ ಕಣ್ಣಿನ ರೆಪ್ಪೆ ನಿಧಾನವಾಗಿ ಮುಚ್ಚಿಕೊಳ್ಳುತ್ತಿತ್ತು. ಆಗಲೇ "ಸಾರ್...ಸಾರ್..." ಎನ್ನುವ ಆರ್ತನಾದ ಹೊರಗಡೆಯಿಂದ ಕೇಳಿ ಅವರಿಗೆ ನಿದ್ರಾಭಂಗವಾಯಿತು. ಅವರು ಮಲಗಿದ್ದಲ್ಲಿಂದ ತಕ್ಷಣವೇ ಏಳಲಿಲ್ಲ. ಅವರದು ಎಷ್ಟಾದರೂ ಪತ್ತೇದಾರಿ ಮಿದುಳು. ಆದ್ದರಿಂದ ಮಲಗಿದಲ್ಲಿಂದಲೇ ಯೋಚಿಸಿದರು. "ಈ ಕಂಠ ಯಾರದಿರಬಹುದು ? ಈ ಆರ್ತನಾದದ ಕಾರಣವೇನು ?"

"ಸ್ವಾಮಿ ..ಸಾರು...ಸಾರ್‍ರೂ..."

ಅರ್ಧ ಘಂಟೆಯಿಂದ ಆರ್ತಧ್ವನಿ ಕೇಳುತ್ತಿದ್ದರೂ ಬಾಬುಗಳು ತಮ್ಮ ಮಿದುಳಿಗೆ ತ್ರಾಸ ಕೊಟ್ಟು ಆ ಆರ್ತಧ್ವನಿಯ ಕಾರಣ, ಅದನ್ನು ಹೊರಹೊಮ್ಮಿಸುತ್ತಿದ್ದ ಕಂಠದ ಪತ್ತೆ ತರದೂದಿನಲ್ಲೇ ಇದ್ದರು. ಆದರೆ ಒಂದು ಹೆಜ್ಜೆ ಹೊರಬಂದು ನೋಡಿದ್ದರೆ ಈ ತ್ರಾಸವೇ ತಪ್ಪುತ್ತಿತ್ತೆಂಬುದು, ಅವರಿಗೆ ಅರಿವಾಗಿರಲಿಲ್ಲ.

ಸಾರೂ ..ಸಾರ್‍ರೋೕ..."

ಧ್ವನಿಯ ಕಾತುರತೆ, ಅದರ ಷಡ್ಜದ ಶೃತಿ, ಅದರೊಂದಿಗೆ ಬಾಗಿಲು ಬಡಿಯುವ ಶಬ್ದವೂ ಹೆಚ್ಚಾದ ನಂತರ ಬಾಬುಗಳು ನಿಧಾನವಾಗಿ ಎದ್ದರು. ತಮ್ಮ ಮೇಜಿನ ಡ್ರಾಯರಸಲ್ಲಿದ್ದ ಪಿಸ್ತೂಲನ್ನು ಕೈಗೆತ್ತಿಕೊಂಡು ಬಾಗಿಲನ್ನು ಅರ್ಧ ತೆರೆದು ನೋಡಿದರು. ಬಾಗಿಲು ತೆರೆದದ್ದೇ ತಡ, ಹೊರಗಿದ್ದ ವ್ಯಕ್ತಿ ಒಳನುಗ್ಗಲು ಹವಣಿಸಿತು.

"ಖಬರ್‌ದಾರ್...ಪಿಸ್ತೂಲು ಬಾರಾಗ್ಯೆತೆ..." ಎಂದು ಧ್ವನಿ ಎತ್ತರಿಸಿ ಘರ್ಜಿಸಿದರು ಬಾಬುಗಳು.

"ನಾನೂ ಸಾರ್.. ನಮ್ಮ ಮನೆಗೆ ಕಳ್ಳ ನುಗ್ಗಿದ್ದಾನೆ" ಒಂದೇ ಉಸುರಿಗೆ ಆ ವ್ಯಕ್ತಿ ಒದರಿತು.

ಆದರೂ ಬಾಬುಗಳು ಹಾಗೆಲ್ಲಾ ಆ ವ್ಯಕ್ತಿಯ ಮಾತನ್ನು ನಂಬುವಂತಿರಲಿಲ್ಲ. ಎಷ್ಟಾದರೂ ಅವರದು ಯಾಮೀಕ ತಲೆ. ಅವರು ಬಾಗಿಲನ್ನು ಪೂರಾ ಮುಚ್ಚಿ, ಕಿಟಕಿಯ ಕಡೆ ಬರುವಂತೆ ಹೇಳಿದರು. ಆತ ಕಿಟಕಿಯ ಕಡೆ ಬಂದನಂತರ ಕೇಳಿದರು.

" ನಿನ್ನ ಹೆಸರೇನಯ್ಯಾ...?"

" ಶೀನಪ್ಪ..."

" ಕಸಬು...?"

" ವೈದೀಕ ಬ್ರಾಹ್ಮಣ, ಪುರೋಹಿತ್ಯ...ಬ್ರಾಹ್ಮಣಾರ್ತ ಇತ್ಯಾದಿ .."

ತಂದೆ ಹೆಸ್ರು...?"

ದೊಂಗಣ್ಣಬಾಬುಗಳು ಪ್ರಶ್ನೆಗಳ ಸರಪಳಿಯನ್ನೇ ಹೆಣೆಯುತ್ತಿದ್ದುದು ಕಂಡು ಗಾಭರಿಯಾದ ಶೀನಪ್ಪ " ಸಾರ್ ಇದೆಲ್ಲಾ ಆಮೇಲೆ ಹೇಳ್ತೀನಿ, ಮೊದಲು ತಾವು ಬಂದು ಚೋರಾಕ್ರಮಣ ಮಾಡಿದರೆ ಒಳ್ಳೆಯದು." ಎಂದು ಭಿನ್ನವಿಸಿಕೊಂಡ.

" ಅದೆಲ್ಲಾ ನಿಮಗ್ಯಾಕ್ರಿ? ನಮ್ಮ ಚಾಕ್ರಿ ಏನೈತೆ ಅಂತ ನಮ್ಗ ಗೊತ್ತೈತೆ. ಕಾನೂನಿನ ಪರಕಾರ ನಮ್ಗೆ ನೀವು ಮುಖ್ಯವೇ ಒರ್ತು ಕಳ್ಳ ಮುಖ್ಯವಲ್ಲ..."

ದೊಂಗಣ್ಣನವರ ಬಾಯಿಯಲ್ಲಿ ಕಾನೂನಿನ ವ್ಯಾಖ್ಯಾನವನ್ನು ಕೇಳಿ ಹೆದರಿದ ಶೀನಪ್ಪ ಕಳ್ಳನ ಬದಲು ಎಲ್ಲಿ ತನ್ನನ್ನೇ ಹಿಡಿದು ಲಾಕಪ್ಪಿಗೆ ದೂಡುವರೋ ಎಂದು ಚಿಂತಾಕ್ರಾಂತನಾದ.

" ನೋಡಿ ಸಾರ್ ಕಳ್ಳ ಈ ವೇಳೆಗೆ ಓಡಿಯೇ ಹೋಗಿದ್ರೆ ನೀವು ಬಂದೂ ಪ್ರಯೋಜನವಾಗುವುದಿಲ್ಲ. ನಾನು ಮೊದಲು ಠಾಣೆಗೆ ಹೋಗಿ ಅಲ್ಲಿ ಧಫೇದಾರ‍್ರಿಗೆ ವಿಷಯವನ್ನು ತಿಳಿಸಿದೆ. ಅವರು ತಮಗೆ ಅರಿಕೆ ಮಾಡಿಕೊಳ್ಳುವಂತೆ ಹೇಳಿ ಇಲ್ಲಿಗೆ ಕಳುಹಿಸಿದರು. ಧಫೇದಾರ‍್ರು ಕನಿಷ್ಟ ಬಿಲ್ಲೆಗಳೊಂದಿಗೆ ಇಲ್ಲಿಗೆ ಬರುತ್ತಾರಂತೆ..."

ಶೀನಪ್ಪ ಇಷ್ಟು ಒದರಿ ಮೌನತಳೆದ ಆಗತಾನೆ ಬಿಸಿಲಲ್ಲಿ ಹೊಟ್ಟೆ ಎತ್ತಿಕೊಂಡು ಓಡಿ ಬಂದದ್ದರಿಂದ ಅವನಿಗೆ ಆಯಾಸವಾಗಿತ್ತು. ಅವನನ್ನು ಬಿಸಿಲಲ್ಲೇ ನಿಲ್ಲಿಸಿ, ಪ್ರಶ್ನೆಗಳನ್ನೇ ಮಳೆಯಂತೆ ಕರೆಯುತ್ತಾ ಕುಳಿತಿದ್ದ ದೊಂಗಣ್ಣನವರನ್ನು ಕಂಡು ಕೋಪವೂ ಉಕ್ಕುತ್ತಿತ್ತು.

" ಕಳ್ಳನನ್ನು ಕಳ್ಳ ಅಂತ ಎಂಗ್ರಿ ಏಳ್ತೀರಿ....?"

ಬಾಬುಗಳು ತನಿಖೆಯನ್ನು ಮುಂದುವರೆಸಿದರು. ಶೀನಪ್ಪನಿಗೆ ಈ ಪ್ರಶ್ನೆಯನ್ನು ಜೀರ್ಣಿಸಿಕೊಳ್ಳುವುದಕ್ಕೆ ಸಾಧ್ಯವಾಗದೆ ಹೋಯಿತು. ಎಂಥೆಂತಹ ಬ್ರಾಹ್ಮಣಾರ್ತಗಳನ್ನು ಜೀರ್ಣಿಸಿಕೊಂಡಿದ್ದ ಋಧೀಮನಿಗೆ ಈ ಪ್ರಶ್ನೆ ಜೀರ್ಣವಾಗದೆ ಗಂಟಲಿನಲ್ಲಿಯೇ ಉಳಿಯಿತು. ಅಷ್ಟರಲ್ಲಿ ಕನಿಷ್ಟಬಿಲ್ಲೆಗಳು ಬಾರುಮಾಡಿದ ರೈಫಲ್ಲುಗಳ ಸಮೇತ ಧಫೇದಾರರನ್ನು ಮಧ್ಯೆ ಬಿಟ್ಟುಕೊಂಡು ಮೆರವಣಿಗೆಯಲ್ಲಿ ಬಂದರು. ಕಿಟಕಿಯ ಜಾಲರಿಯ ಹಿಂದಿದ್ದ ದೊಂಗಣ್ಣನವರ ಮುಖವನ್ನು ಕಂಡು ಸೆಲ್ಯೂಟ್ ಹೊಡೆದು ನಿಂತರು.

ಧಫೇದಾರ ಎರಡು ಫೂಟು ಮುಂದೆ ಬಂದು, ಪಾಪಾಸನ್ನು ಶಬ್ದ ಮಾಡಿ ಹೇಳಿದ.

"ಸಾರ್ ಇವರ ಮನಿಗೆ ಕಳ್ಳ ನುಗ್ಗವ್ನೆ ಅಂತ ಕಂಪ್ಲೈಂಟ್ ಕೊಟ್ಟವ್ರೆ ಬುದ್ಯೋರು ತನಿಖೆಗೆ ಬ್ಯಾಗ ಬರ್ಬೇಕು..."

"ಆಗ್ಲೆ ನಾನು ಬಂದು ಎರಡು ಗಂಟೆ ಮೇಲಾಯ್ತು. ಇನ್ನೂ ಕಳ್ಳ ಅಲ್ಲೇ ಇರ್‍ತಾನೋ, ಇಲ್ಲ ಒಡವೆ ವಸ್ತ್ರ ಕದ್ಕೊಂಡು ಪರಾರಿಯಾಗಿರ್‍ತಾನೋ ಯಾರಿಗೊತ್ತು." ಎಂದು ಗೊಣಗಿದ ಶೀನಪ್ಪ. ಪೋಲೀಸರ ಅಡಿಭಾನಸ ನೋಡಿ ಅವನಿಗೆ ರೇಗಿತು.

"ನಿಮಗೇನ್ರಿ ಅದ್ನೆಲ್ಲಾ ಕಟ್ಕೊಂಡು. ಕಳ್ಳ ಓಡೋಗಿದ್ರೆ ಇಡ್ಕೊಂಡು ಬರೋ ಜವಾಬ್ದಾರಿ ನಮ್ದೋ, ನಿಮ್ದೋ ಏಳಿ. ಒತ್ತಾಯ್ತು ಒತ್ತಾಯ್ತು ಅಂತ ಸುಮ್ನೆ ಬಡ್ಕಂತೀರಲ್ಲಾ, ನಾವು ಯೂನಿಫಾರಂ ಆಕ್ಕೋಳ್ಳದೆ ಅಂಗೆ ಏಕ್ ದುಮ್ ಬಂದ್ಬುಡೋಕಾಯ್ತದಾ? ಕಳ್ಳನ್ಗೂ, ಪೋಲೀಸೋನು ಯಾವ್ನು ಅಲ್ದೆ ಇರೋವ್ನು ಯಾವ್ನು ಅಂತ ತಿಳೀಬ್ಯಾಡ್ವಾ ? ಖಾಕಿ ದಿರಸಿಲ್ಲದೆ ಬಂದ್ರೆ ಅವ ನಮ್ಮೇಲೂ ತಿರುಗಿ ಬೀಳೋಕಿಲ್ವ ಏಳಿ .."ಎಂದು ಶೀನಪ್ಪನನ್ನು ದಬಾಯಿಸಿ, ಬಾಬುಗಳು, ಸಾವಕಾಶವಾಗಿ ಎದ್ದು ತಮ್ಮ ಸಮವಸ್ತ್ರವನ್ನು ಧರಿಸಿ, ಯಥಾ ಸಾವಕಾಶವಾಗಿ, ರಿವಾಲ್ವಾರನ್ನು ಬೆಲ್ಟಿನ ಪಾಕೆಟ್‌ನಲ್ಲಿ ತೂರಿಸಿ, ನಾಲ್ಕು ಸುತ್ತು ಗೋಲಿಗಳನ್ನು ತುರುಕಿಕೊಂಡು ಮನೆಗೆ ಬೀಗ ಹಾಕಿ ಹೊರ ನಡೆದರು. ಉಳಿದ ಯಾಮಿಕರು ಅವರನ್ನು ಹಿಂಬಾಲಿಸಿದರು. ಗಲ್ಲಿ ಗಲ್ಲಿಗಳಲ್ಲಿ ಈ ಮೆರವಣಿಗೆ ಸಾಗಿ ಮುಳ್ಳೂರಿನ ನಾಲ್ಕನೇ ಕ್ರಾಸಿನ ಗಲ್ಲಿಯಲ್ಲಿ ಬಂದು ಶೀನಪ್ಪನ ಮನೆಯ ಮುಂದೆ ನಿಂತಿತು. ಈ ಅಚ್ಚರಿಯ ಚೋರಾಕ್ರಮಣವನ್ನು ನೋಡಲು ಮುಳ್ಳೂರಿನ ಜನಸ್ತೋಮ ಸುತ್ತುವರೆಯಿತು.

"ಹಿತ್ತಲಲ್ಲಿ ಕಳ್ಳ ಇನ್ನೂ ಇದ್ದಾನೆ" ಎಂಬ ವಾರ್ತೆಯನ್ನು ಕೇಳಿ ಶೀನಪ್ಪ ಹರ್ಷಚಿತ್ತರಾದರು, ದೊಂಗಣ್ಣನವರು ಬೆವರಿ ನೀರಾದರು. ವರಸಿಕೊಂಡು ಯಾಮಿಕರನ್ನೆಲ್ಲಾ ಸುತ್ತಲೂ ಚಕ್ರಾಕಾರವಾಗಿ ನಿಲ್ಲಿಸಿ ರೈಫಲ್ಲುಗಳನ್ನು ಕಳ್ಳನೆಡೆಗೆ ಹಿಡಿಯುವಂತೆ ಹೇಳಿದರು. ತಾವು ರಿವಾಲ್ವಾರನ್ನು ಹಿಡಿದು, ಮೇಲಕ್ಕೆ ಒಂದು ಹುಸಿ ಗುಂಡನ್ನು ಹಾರಿಸಿ, ಕಳ್ಳನಿಗೆ ಕೋಳ ತೊಡಿಸಲು ಮುನಿಸಾಮಿಯನ್ನು ನೂಕಿದರು. ಮುನಿಸಾಮಿ ಹಿಂದು ಹಿಂದಕ್ಕೆ ಹೆಜ್ಜೆ ಸರಿಸುತ್ತಾ ಕೊನೆಗೆ ಕಳ್ಳನಿಗೆ ದಬ್ಬಲ್ ಕೋಳವನ್ನು ತೊಡಿಸಿದಮೇಲೆಯೇ ಬಾಬುಗಳು ಸರಾಗವಾಗಿ ಉಸಿರಾಡಿದ್ದು. ಆ ವಿಚಿತ್ರ ಚೋರ ಯಾವ ತಂಟೆ ತಕರಾರು ಮಾಡದೆಯಿದ್ದುದ್ದನ್ನು ನೋಡಿ, ಮಿಕ್ಕ ಮಂದಿ ಅಚ್ಚರಿಪಟ್ಟರು. ಅವನನ್ನು ಸಶಸ್ತ್ರ ಪೋಲೀಸರು ಎಳೆದೊಯ್ದಾಗಲೇ ಅವನ ಒಂದು ಕಾಲು ಕುಂಟು ಎಂಬುದು ತಿಳಿದದ್ದು. ಬಾಬುಗಳು ಅವನನ್ನು ಲಾಕಪ್ಪಿಗೆ ಹಾಕಿ ನಂತರ ತನಿಖೆಗೆ ಪ್ರಾರಂಭಿಸಿದರು. ಶೀನಪ್ಪನವರ ಮನೆಯಲ್ಲಿ ಯಾವುದು ಕಳುವಾಗಿರದಿದ್ದರೂ ಕಳ್ಳತನ ಪ್ರಯತ್ನದ ಆರೋಪದ ಮೇಲೆ, ಛಾರ್ಜುಷೀಟು ಹಾಕಿದರು ಬಾಬುಗಳು.

" ಯಾಕೋ ಬದ್ಮಾಷ್ ಕದಿಯೋಕೆ ಬಂದೆ...?"

ಹುಲಿ, ಬೋನಿಗೆ ಬಿದ್ದನಂತರ ನರಮನುಷ್ಯ ಗುಡಿಗಾಡಿದಂತೆ, ಬಾಬುಗಳು ಘರ್ಜಿಸಿದರು.

" ಒಟ್ಟೆಗೆ ಇಟ್ಟಿರಲಿಲ್ಲ ಬುದ್ದಿ. ಮೂರ್ಚಿನದಿಂದ ಉಪ್ವಾಸ ನನ್ನೊಡೆಯಾ..."

ಇನ್ನು ಎಷ್ಟು ಚೋರಿ ಮಾಡಿದ್ದೀ..."

" ಅಯ್ಯೋ ನಿಮ್ಮ ಪಾದ...ಇದೇ ಮೊದಲ್ನೇದು ಬುದ್ಧಿ..."

ಬಾಬುಗಳ ಆಶಾಗೋಪುರ ಕಳಚಿಬಿತ್ತು. ದೊಡ್ಡ ಕೇಸು ಅಂತ ಕೈ ಹಾಕಿದರೆ, ಪೆಟಿಕೇಸುಗಳಿಗಿಂತೆಲ್ಲಾ ಪೆಟಿಯಾಯಿತಲ್ಲಾ ಎಂದು ನಿರಾಸೆಯಾಯಿತು.

" ಇಂದೆ ಏನು ಮಾಡ್ಕೊಂಡಿದ್ದೆ ಜೀವ್ನಕ್ಕೆ..."

" ಕಲ್ಲು ಒಡ್ದಿದ್ದೆ ಬುದ್ದಿ..."

" ಯಾಕದ್ನ ಬುಟ್ಟೆ..."

" ನಾನು ಕಾಲ್ಮೇಕೆ ಕಲ್ಲು ಎತ್ತಿ ಆಕ್ಕೊಂಡು ಕುಂಟಾದಮೇಕೆ, ಮೇಸ್ತ್ರಿ ನನ್ನ ಕೆಲಸದಾಗ್ನಿಂದ ತೆಗೆದು ಆಕ್ಬುಟ್ಟ. ಎಲ್ಲೂ ಕೆಲಸ ಸಿಕ್ಕಿಲ್ಲ. ಒಟ್ಟೆ ಅಸಿವೂ ತಡೆ ಯೋಕಾಗ್ದೆ ಇಂಗ್ಮಾಡ್ದೆ..."

ದೊಂಗಣ್ಣ ಬಾಬುಗಳ ಮುಖ ಕಂದಿತು. ಈ ಕೇಸಿನಲ್ಲಿ ಯಾವ ಹುರುಳೂ ಇಲ್ಲವೆಂದು ಅವರು ಕೈ ಹಿಸುಕಿಕೊಂಡರು. ಮುಳ್ಳೂರಿನ ಮ್ಯಾಜಿಸ್ಟ್ರೇಟ್, ಈ ಕೇಸನ್ನು ನೋಡಿ, ತನ್ನನ್ನು ಅವಮಾನಿಸದೆ ಇರುತ್ತಾನೆಯೋ ಎಂದು ಸಂಶಯವೂ ಉತ್ಪನ್ನವಾಯಿತು. ಅವರು ಪುತ್ಥಾಸೇಟನ್ನು ಹೊತ್ತಿಸಿಕೊಂಡು, ಹಾಗೆ ಯೋಚ ನಾಕ್ರಾಂತರಾಗಿ ಕುಳಿತರು.

ಕಳ್ಳನೇ ಕೇಳಿದ..." ಸಾರ್...ನನ್ನ ಜೈಲಿಗೆ ಆಕಿದ್ರೆ ಉಣ್ಣೋಕೆ ಇಕ್ತಾರಲ್ಲವೆ...?"

" ಹೂ..." ನಿರುತ್ಸಾಹದಿಂದಲೇ ನುಡಿದರು ಬಾಬುಗಳು.

" ಅಂಗಾದ್ರೆ ಮಸಿ ಜಾಸ್ತಿ ಜಿನಾನೇ ಸಿಕ್ಸೆ ಆಗೋ ಅಂಗೆ ಮಾಡಿಸ್ಬುಡಿ ಬುದ್ಧಿ ನಿಮಗೆ ಕೈ ಮುಗಿತೀನಿ..."

" ಅಲ್ಲಯ್ಯ ನಿನ್ನ ಕೇಸಿನಲ್ಲಿ ಜೇಲಿಗೆ ಕಳಿಸ್ತಾರೋ ಇಲ್ಲಾ ಅಂಗೇ ಬುಟ್ಬೇ ಬುಡ್ತಾರೋ ಏಳೋದೇ ಕಸ್ಟ ಆಗೈತೆ. ಓಗ್ಲಿ ಒಂದು ದರೋಡೇನೋ, ಖೂನಿನೋ ಕಡೆಗೆ ಮನೆಗೆ ನುಗ್ಗಿ ಮಡಮೆ ಮಸ್ತ್ರನಾರ ಕದ್ದಿದ್ರೆ ಒಂದು ನಾಲ್ಕು ಮರ್ಸಾನಾದ್ರು ಜೈಲಿನಾಗೆ ಕುಂದ್ರಿಸಬೋದಾಗಿತ್ತು. ನೀನು ಸುಮ್ಮೆ ಇತ್ತಲ್ಡಾಗೆ ಬಟ್ಟೆ ಇಡ್ಕೊಂಡು

ನಿಂತ್ಕಂಡ್ರೆ ನಿಂಗೆ ಸಜಾ ಎಂಗೆ ಆಕ್ಕೋಣ ಏಳಿ. ಇಂತಾ ಬೇಕೂಪ್ ಚೋರಿಗೆ ಸಜಾ ಆಕೋಕಾದ್ರೂ ಮ್ಯಾಜಿಸ್ಟ್ರೇಟರಿಗೆ ಆಯ್ತುದಾ ಏಳಿ..."

"ಎಂಗಾದ್ರು ಮಾಡಿ ಬುದ್ಧಿ. ಕಡೆಪಕ್ಷ ಮೂರು ವರ್ಷನಾರ ಅನ್ನದ ಏರ್ಪಾಡು ಮಾಡಿಕೊಟ್ರೆ ಬುದ್ಧಿಯೋರ್ನ ಈ ಜನ್ಮದಾಗೆ ಮರಿಯೋಕಿಲ್ಲ."

ಇನ್ಸ್‌ಪೆಕ್ಟರ್ ದೊಂಗಣ್ಣ ಬಾಬುಗಳಿಗೆ ಬಹಳ ಸೋಜಿಗವಾಯಿತು. ಕ್ರೈಂ ಬ್ರಾಂಚ್ ಇತಿಹಾಸದಲ್ಲೇ ವಿಚಿತ್ರವಾಗಿತ್ತು ಈ ಚೋರನವಾದ. ಕಳ್ಳರು ಪೋಲೀಸಿನವರ ಕೈನಿಂದ ತಪ್ಪಿಸಿಕೊಳ್ಳಲು ಹವಣಿಸಬೇಕು. ಇಲ್ಲದಿದ್ರೆ ಸ್ಟೇಷನ್ನಲ್ಲಿ ಸುಳ್ಳನ್ನಾದ್ರು ಬೊಗಳಿ ತಾನು ತಪ್ಪಿತಸ್ಥನಲ್ಲವೆಂದು ಸಾಧಿಸಬೇಕು. ಈ ವಿಚಿತ್ರ ಚೋರ ಕಳ್ಳತನವೇ ಮಾಡದೆ ಜೈಲಿನಲ್ಲಿ ಹೆಚ್ಚು ಕಾಲವಿರಲು ತಹತಹಪಡುತ್ತಾನಲ್ಲ ಎಂದು ಮೂಗಿನಮೇಲೆ ಬೆರಳಿಟ್ಟುಕೊಂಡರು. ಹೊಟ್ಟೆಯ ಪಾಡಿಗಾಗಿ ಎಂಥಹ ಮಾರ್ಗ ಎಂದು ನಿಟ್ಟುಸಿರೊಂದು ಅವರ ನಾಸಿಕದಿಂದ ಹೊರಹೊಮ್ಮಿತು. ಆತನ ದೈನ್ಯ ದೃಷ್ಟಿಯನ್ನು ನೋಡಲಾಗದೆ ದೊಂಗಣ್ಣನವರು ಹೇಳಿದರು.

"ಒಂದು ಕಂಡಿಷನ್ ಮ್ಯಾಕೆ ನಾನು ನಿನಗೆ ನಾಲ್ಕು ವರ್ಷ ಜೈಲ್ನಾಕೆ ಕಂಡರಿಸ್ತೀನಿ..."

"ಏಳಿ ಬುದ್ಧಿ...ಎಂತಾದಾದ್ರು ಒಪ್ಕಂತೀನಿ..."

"ಅಂಗಾದ್ರೆ ನಮ್ಮಾವ್ವು ಪತ್ತೆ ಆಗ್ದೆಯಿರೋ ಅಳೇ ಕೇಸುಗಳು ಬೇಕಾದಷ್ಟೈತೆ. ಅದ್ನೆಲ್ಲಾ ನೀನೇ ಮಾಡ್ದೆ ಅಂತ ಒಪ್ಕಂಡುಬುಡು. ಆಗ ನೀನು ಜೈಲ್ನಾಗೆ ಆರಾಮವಾಗಿ ಇರ್ಬೋದು."

"ಅಂಗೆ ಆಗ್ಲಿ ಬುದ್ಧಿ. ಅನ್ನ ಕೊಟ್ಟ ದಣಿಗೋಳು, ನಿಮ್ಮುಪಕಾರಾನ ಎಂದೂ ಮರೆಯೋಕಿಲ್ಲ,..."

ಬಾಬುಗಳು ಛಾರ್ಜ್‌ಷೀಟಿನಲ್ಲಿ ಹತ್ತು ಕಳ್ಳತನದ ಆಪಾದನೆಯನ್ನು ಹೊರಿಸಿದರು. ಈ ಚೋರಾಗ್ರೇಸರನನ್ನು ಹಿಡಿದ ಕೀರ್ತಿ ದೊಂಗಣ್ಣನವರಿಗೆ ಸೇರಿದರೂ, ಮುಳ್ಳೂರಿನ ಮ್ಯಾಜಿಸ್ಟ್ರೇಟರು ಕಳ್ಳನ ಕುಂಟ ಕಾಲನ್ನು ನೋಡಿ ಅವನು ಇಷ್ಟು ಕಳ್ಳತನಗಳನ್ನು ಮಾಡಿರಲಾರನೆಂದು ಸಂಶಯವೇ ಪಟ್ಟರು. ಆದರೂ ಕಾನೂನಿನ ಪ್ರಕಾರ ಮೂರು ವರ್ಷದ ವರೆವಿಗೆ ಆ ವಿಚಿತ್ರ ಚೋರ ಹೊಟ್ಟೆಪಾಡಿಗಾಗಿ ತಾಪತ್ರಯಪಡಬೇಕಾಗಿರಲಿಲ್ಲ.

ಈಗ ಯಾವ ಹೊಸ ಕಂಪ್ಲೇಂಟು ಬಂದರೂ ದೊಂಗಣ್ಣನವರು ಅಂಜಬೇಕಾಗಿರಲಿಲ್ಲ ಅವರ ದರ್ಬಾರಿನಲ್ಲಿ ಕಳ್ಳನ ಪತ್ತೆಯಾಗುತ್ತಿತ್ತು. ಆದರೆ ಕಳೆದ ಮಾಲಿನ ಪತ್ತೆ ಸಾಧ್ಯವಿರಲಿಲ್ಲ.

—ಕೆ. ಎನ್. ಕಿಟ್ಟೈನ್

ಭೋಜನ—ಡಿನ್ನರ್ ಜಾಕೆಟ್

ಭಾನುವಾರ ರಾತ್ರಿ ಭೋಜನ ಕೂಟಕ್ಕೆ ಕರೆದಿದ್ದರು. ಇಂಗ್ಲೆಂಡಿನಿಂದ ವಿಶ್ವ ವಿದ್ಯಾನಿಲಯಗಳಲ್ಲಿ ಭಾಷಣ ಮಾಡಲು ನಮ್ಮ ದೇಶಕ್ಕೆ ಬಂದಿದ್ದ ಪ್ರೊಫೆಸರ್ ಪೀಟರ್ ಓಗಿಲ್ವಿ ಅವರು ನಮ್ಮೂರಿಗೆ ಬಂದಿದ್ದರು. ಇಲ್ಲಿದ್ದ ಇಂಗ್ಲೀಷ್ ಜನರು ಪ್ರೊಫೆಸರ್ ಗೌರವಾರ್ಥ ಭೋಜನಕೂಟ ಏರ್ಪಡಿಸಿದ್ದರು. ಪ್ರೊಫೆಸರ ಹಳೆಯ ಸ್ನೇಹಿತ ಅಂತ ನನ್ನನ್ನು ಕರೆದಿದ್ದರು. ನನಗೂ ಆಸೆ ಹೋಗಬೇಕು ಅಂತ. ಪೀಟರ್ ನನ್ನ ಕ್ಲಾಸ್‌ಮೇಟ್ ಆಕ್ಸಫರ್ಡಿನಲ್ಲಿ. ಪರಮ ಮಿತ್ರ ಕೂಡ ನನಗೆ. ನಮ್ಮಿಬ್ಬರ ಗೆಳೆತನ ಪವಿತ್ರವಾದುದು. ಇಂಗ್ಲೀಷ್ ಸಾಹಿತ್ಯದ ಮೆರಗನ್ನು ಅವ ತೋರಿಸಿಕೊಟ್ಟಾಗ ಸಂಸ್ಕೃತದ ಆಳವನ್ನು ನಾನು ನಿದರ್ಶಿಸುತ್ತಿದ್ದೆ. ಕಡೆಗೆ ನಾನು ಇಂಗ್ಲೆಂಡಿನ ವ್ಯಾಪಾರಿ ಸಂಸ್ಥೆಯಲ್ಲಿ ಕೆಲಸಕ್ಕೆ ಸೇರಿ ಭಾರತಕ್ಕೆ ವರ್ಗ ಮಾಡಿಸಿಕೊಂಡೆ ಆ ಪೀಟರ್ ಆಕ್ಸ್‌ಫರ್ಡಿನಲ್ಲೇ ಮಾಸ್ತರಾಗಿ ಈಗ ೨೦ ವರ್ಷಗಳ ನಂತರ ಪ್ರೊಫೆಸರ್ ಆಗಿ ವಿಶ್ವ ವಿಖ್ಯಾತನಾಗಿದ್ದ. ಪಳಗಿದ ಆನೆ ಖೆಡ್ಡಾದಲ್ಲಿ ಕೆಲಸ ಮಾಡುವ ಹಾಗೆ, ಇಂಗ್ಲೀಷ್ ವ್ಯಾಪಾರಿ ಸಂಸ್ಥೆಯ ಬ್ರಾಂಚ್ ಮ್ಯಾನೇಜರಾಗಿ ನಾನು ಸುಖ ಜೀವನ ನಡೆಸುತ್ತಿದ್ದೆ. ಆದಕ್ಕೇ ಭೋಜನ ಕೂಟಕ್ಕೆ ಹೋಗಬೇಕು ಎಂದು ನಿರ್ಧರಿಸಿದೆ.

ನೂರಾರು ಜನ ಅತಿಥಿಗಳು ಇಂಗ್ಲೀಷನವರಾಗಿರುತ್ತಾರೆ. ಭೋಜನಕ್ಕೆ ಸೂಕ್ತ ಉಡುಪು ಧರಿಸಿ ಬಂದಿರುತ್ತಾರೆ, ಕಾರಣ ನಾನೂ ಸೂಕ್ತ ಉಡುಪನ್ನು ಧರಿಸಿ ಹೋಗುವುದು ಎಂದು ನಿರ್ಧರಿಸಿದೆ. ಸಂಜೆ ಆರು ಗಂಟೆಗೆ ಹಳೆ ಪೆಟ್ಟಿಗೆ ತೆಗೆದೆ. ಡಿನ್ನರ್ ಜಾಕೆಟ್‌ನಲ್ಲಿ ಹುಳು ಹೊಡೆದು ತೂತಾಗಿತ್ತು. ತೂತಿನ ಹಿಂದುಗಡೆಗೆ ಹಳೇ ಬಟ್ಟೆ ಚೂರನ್ನು ಅರಾಲ್ಡೈಟ್ ಹಾಕಿ ಅಂಟಿಸಿದೆ. ಮುಂದುಗಡೆ ಕಪ್ಪು ಶಾಯಿಯನ್ನು ಧಾರಣವಾಗಿ ಹಚ್ಚಿದೆ. ರಾತ್ರಿಯ ಹೊತ್ತು ಕಾಣಿಸುಲ್ಲ ಅಂತ ಅನ್ನಿಸಿತು. ಆದರೂ ಶರಾವತಿ ಶಕ್ತಿ ಬಂದಿದೆ. ಕ್ಲಬ್ಬಿನ ದೀಪಗಳೆಲ್ಲಾ ಧಗ ಧಗ ಅಂತ ಉರಿದರೆ, ಅವ ಲಕ್ಷಣವಾಗಿ ಕಾಣುತ್ತೇನೋ ಎನ್ನಿಸಿತು. ನೆಪೋಲಿಯನ್ ತರಹ ಕೈಯನ್ನು ಹೊಟ್ಟೆ ಯಡ್ಡ ಹಿಡಿದುಕೊಂಡರೆ ಆದೀತು ಎಂದುಕೊಂಡೆ. ಷರಾಯಿ ತಕ್ಕಮಟ್ಟಿಗೆ ಸರಿಯಾಗೇ ಇತ್ತು. ಡ್ರೆಸ್‌ಷರ್ಟ್ ತೆಗೆದೆ. ಮುಂದೆ ಕಾಣಿಸುವ ರಟ್ಟಿನ ಭಾಗದಲ್ಲಿ ಕಲೆಯಿತ್ತು, ಮಾಸಲ ಕಲೆ. ಸರಿ, ನೆಪೋಲಿಯನ್ ಪೋಸ್‌ನಲ್ಲಿ ಅದೂ ಮರೆಯಾಗುತ್ತೆ ಎಂದು ಧೈರ್ಯ ತಂದುಕೊಂಡೆ. ಷೂಗಳು ಮಾಸಲು ಮಾಸಲಾಗಿತು.

ಷೂಪಾಲಿಷ್ ಹಾಕಿ ತಿಕ್ಕಿದೆ. ಮಾಸಲು ಮಾಸಲಾಗೇ ಕಾಣಿಸಿತು. ಸ್ವಲ್ಪ ಸೀಮೆ ಯೆಣ್ಣೆ ಹಾಕಿ ಉಜ್ಜಿದೆ. ಥಳ ಥಳ ಅಂತು. ಸಾಕು ಎಂದುಕೊಂಡೆ.

ಕಾಲುಚೀಲ ಹುಡುಕಿದೆ. ಒಂದು ಕಪ್ಪು ಕಾಲುಚೀಲ ಪುಸ್ತಕದ ಬೀರು ಕೆಳಗೆ ಕಾಣಿಸಿತು. ಅದನ್ನು ಆಳೆದೆ. ತೋರುವ ಭಾಗದಲ್ಲಿ ತೂತಿರಲಿಲ್ಲ. ತಳ ಇತ್ತಿಲ್ಲ. ಆದರೆ ಅದು ಷೂ ಒಳಗೆ ಇರುತ್ತಲ್ಲ! ಇನ್ನೊಂದೆಲ್ಲಿ? ಅಷ್ಟು ಹೊತ್ತಿಗೆ ಟೆಲಿಫೋನ್ ಬಾರಿಸಿತು. ರಿಸೀವರ್ ತೆಗೆದುಕೊಂಡೆ. ಭೋಜನ ಕೂಟಕ್ಕೆ ಎಂಟಕ್ಕೆ ಮುಂಚೆಯೇ ಬಂದುಬಿಡ್ತೀಯಲ್ಲಾ ಎಂದು ಕೇಳಿದರು ಆತಿಥೇಯರು. ಹ್ಞೂ ಎಂದೆ. ರಿಸೀವರ್ ಕೆಳಗೆ ಇಡುವಾಗ; ಟೆಲಿಫೋನ್ ಕೆಳಗೆ ಇನ್ನೊಂದು ಕಪ್ಪು ಕಾಲುಚೀಲ ಕಾಣಿಸಿತು. ಟೆಲಿಫೋನ್‌ಅನ್ನು ಮಗು ಎತ್ತಿಹಾಕಿತ್ತು ಒಮ್ಮೆ. ತಳ ಚೂರು ಬಿಟ್ಟಿತ್ತು. ಕಾಲು ಚೀಲದ ಮೇಲೆ ಮೆಲ್ಲಗೆ ಅದನ್ನು ಕೂರಿಸಿದ್ದೆ. ಈಗ ಕಂಡ ಮೇಲೆ ಜ್ಞಾಪಕ ಬಂತು. ಎರಡೊಂದು ಕೆಲಸ ಆಯ್ತಲ್ಲ! ಕಾಲುಚೀಲವನ್ನು ತಂದಿರಿಸಿದೆ,

ಷರ್ಟು ಹಾಕಿಕೊಂಡೆ. ಒಂದು ಗುಂಡಿ ಆಯಪಾಣಿಸ್ಥಳದಲ್ಲಿ ಇತ್ತಿಲ್ಲ. ನಾಜೂಕಾಗೆ ಹಿಂದಿನಿಂದ ಪಿನ್‌ಹಾಕಿ ಭದ್ರಪಡಿಸಿದೆ. ಕಾಲು ಚೀಲ ಷೂ ಹಾಕಿಕೊಂಡೆ, ಷರಾಯಿ ಏರಿಸಿದೆ. ಹೊಲಿಸಿದಾಗ ಷರಾಯಿ ಹಿತವಾಗಿ ಅಪ್ಪಿಕೊಳ್ಳುತ್ತಿತ್ತು, ಈಗ ಒಂದು ತರಹ ಜಿಗುಟ್ಟಾ ಇತ್ತು. ಮುಂದುಗಡೆ ಮೇಲಿನ ಗುಂಡಿಯನ್ನು ಹಾಕಲಾಗಲಿಲ್ಲ, ಸೇಫ್ಟಿಪಿನ್ನಿನಿಂದ ಸ್ವಲ್ಪ ಹಿಡಿತದಲ್ಲಿಟ್ಟೆ. ಅಂಗಿ ಹಾಕಿಕೊಂಡೆ. ಕನ್ನಡಿ ಎದುರಿಗೆ ನಿಂತೆ. ಯಾರೋ ಲಕ್ಷಣವಾಗಿದ್ದವರು ನಿಂತಂತೆ ಕಾಣಿಸಿತು, ಷಹಬಾಸ್ ಅಂದೆ.

ಇನ್ನೂ ಹತ್ತು ನಿಮಿಷ ಇತ್ತು ಹೊರಡಲು. ಕುರ್ಚಿಯ ಮೇಲೆ ಕುಳಿತೆ. ಪರ್ ಅಂತ ಶಬ್ದವಾಯಿತು. ಬೆತ್ತದ ಕುರ್ಚಿ ಕೊಡುತು ಕೈ, ಎಂದು ಜಗ್ಗನೆದ್ದೆ. ಕುರ್ಚಿ ಸರಿಯಾಗೇ ಇತ್ತು. ಕೈಯಾಡಿಸಿದೆ. ಷರಾಯಿ ಪೂರ್ತಿ ಇಬ್ಭಾಗವಾಗಿತ್ತು.

ಬೇಜಾರು ಬಂತು. ಬಟ್ಟೆಯನ್ನೆಲ್ಲಾ ಬಿಚ್ಚಿಟ್ಟೆ. ಸ್ವಾತಂತ್ರ್ಯ ಭಾರತೀಯರಿಗೆ ಬಂದಿದೆ. ಉಡುಪಿಗೂ ಬರಲಿ ಅಂತ ಕಚ್ಚೆ ಪಂಚೆ ಉಟ್ಟೆ. ಮುಚ್ಚಿದ ಕಾಲರಿನ ಕರಿ ನಿಲುವಂಗಿ ಹಾಕಿದೆ. ಭೋಜನ ಕೂಟಕ್ಕೆ ಹೋದೆ.

ಪೀಟರ್ ತುಂಬಾ ವಿಶ್ವಾಸದಿಂದ ಮಾತನಾಡಿಸಿದ. ಭಾರತದಲ್ಲಿದ್ದಾಗ ಭಾರತೀಯರಂತೇ ಇರಬೇಕು ಎಂದು ಅವನೂ ಪಂಚ ಕಚ್ಚೆ ಪಂಚೆ ಉಟ್ಟು ಕರಿ ನಿಲುವಂಗಿ ಹಾಕಿಕೊಂಡಿದ್ದ. " ನೀನು ಬರೋತನಕ ನಾನೊಬ್ಬನೇ ಈ ಇಂಗ್ಲೀಷಿನವರ ಮಧ್ಯೆ ಕಾಗೆಗಳ ಗುಂಪಿನಲ್ಲಿ ಕೋಗಿಲೆ ಇದ್ದಹಾಗಿದ್ದೆ. ಇದೇ ಉಡುಪು ಧರಿಸಿ ನೀಬಂದಾಗ ಎಷ್ಟೋ ನೆಮ್ಮದಿಯಾಯಿತು " ಎಂದು ತಬ್ಬಿಕೊಂಡ.

—ಪ್ರಸಾದ್

ಕಿವಿ

ಬರೆದವರು :
ಹಾ. ಮ್ಯಾ. ಸೂರಿ

★

ನಾನು ಮೊನ್ನೆ ಬಸ್ಸಿನಲ್ಲಿ ಬರುತ್ತಿದ್ದಾಗ ಹಿಂದೆ ಕುಲುಕುವ ಸೀಟಿನಲ್ಲಿ ಕಂಡಕ್ಟರ್ ಪಕ್ಕದಲ್ಲಿ ಕುಳಿತಿದ್ದೆ. "ಎನಿಮೋ ಟಿಕೆಟ್" ಎಂದು ಕಂಡಕ್ಟರ್ ಒಂದಾಗ ಅವನ ಕಿವಿಯಲ್ಲಿದ್ದ ಪೆನ್ಸಿಲ್ ನನ್ನ ಕಣ್ ಸೆಳೆಯಿತು.

ಕಿವಿ ತಲೆಗೆ ಒಂದು ಲಾಲಿಕೆ (Funnel) ಇದ್ದಂತೆ. ಅದರ ರೂಪ ಪ್ರಶ್ನಾರ್ಥಕ. ಪೆನ್ಸಿಲ್‌ಗೆ ಎಂತಹ ಸರಾಗವಾದ ಕ್ಲಿಪ್. ಬಲಕಿವಿ ಗಂಗೆಗೆ ಸಮಾನವಂತೆ. ಎಡಕಿವಿಗೆ ಆಸ್ಥಾನವಿಲ್ಲ. ಪೆನ್ಸಿಲ್ ಸರಸ್ವತಿಯ ಕುರುಹು. ಬಲಕಿವಿಯ ಮೇಲೆ ಪೆನ್ಸಿಲ್ ಇದ್ದರೆ—ಅಬ್ಬಾ ಎಂತಹ ಪವಿತ್ರತೆ—ಗಂಗೆ ಸರಸ್ವತೀ ಮಿಲನ ! ಕಂಡಕ್ಟರ್ ಎಂತಹ ಪುಣ್ಯವಂತ. ಆದಕ್ಕೇ ಅವನಿಗೆ ಲಕ್ಷ್ಮೀಕಟಾಕ್ಷ (ಸಂಬಳ) ಕಡಿಮೆ.

ನಮ್ಮ ಕಿವಿಗಳು ತಲೆ ಹೊರಗೆ ಚಾಚಿಕೊಳ್ಳದೇ ಕೆನ್ನೆಯ ಮಟ್ಟದಲ್ಲಿದ್ದಿದ್ದರೆ (ಕೆನ್ನೆಗೇ ಒಂದು ತೂತು ಕೊರೆದಂತೆ) ಮೇಷ್ಟರುಗಳು ಹುಡುಗರ ಕಿವಿ ಹಿಂಡುವುದಕ್ಕಾಗುತ್ತಿತ್ತೇ ? ಡಾಕ್ಟರರಿಗೆ ಕಿವಿ ರಿಪೇರಿ ಕಷ್ಟವಾಗುತ್ತಿತ್ತೇ ? ಕನ್ನಡಕ ಹಾಕಿಕೊಳ್ಳುವ ಬಗೆ ಎಂತು ? ಹೋಟಲ್ ಮಾಣಿ, ಕಂಡಕ್ಟರ್ ತಮ್ಮ ಪೆನ್ಸಿಲ್‌ಗಳನ್ನು ಎಲ್ಲಿಟ್ಟುಕೊಳ್ಳುತ್ತಿದ್ದರು ? ಪಾಪ ಲಕ್ಷ್ಮಣ ಶೂರ್ಪನಖಿಯ ಮೂಗೊಂದನ್ನೇ ಕೊಯ್ಯುತ್ತಿದ್ದ !

ನೀವು ಕಣ್ಣು ಮಿಟುಕಿಸುವಂತೆ ಕಿವಿ ಮಿಟುಕಿಸುವಿರಾ ? ನಿಮಿರಿಸುವಿರಾ ? ಅರ್ಥಾತ್ ತರುಣಿಯರಿಗೆ ಕಣ್ ಹೊಡೆಯುವಂತೆ ಕಿವಿ ಹೊಡೆಯಬಲ್ಲಿರಾ ? ಬಸ್ಸಿನ ಬೇರೆ ಬೇರೆ ಭಾಗಗಳನ್ನು ಕೊಳ್ಳುವಂತೆ ಕಿವಿಯೂ ಒಂದು ಬಿಡಿ ಭಾಗವಾಗಿದ್ದರೆ ಎಷ್ಟು ಚೆನ್ನ. ಒಂದು ಬಿಡಿ ಭಾಗದ ಮಾರಾಟದ ಅಂಗಡಿ ತೆರೆದು ಆನೆ ಕಿವಿ, ಇಲಿ ಕಿವಿ, ಕತ್ತೆ ಕಿವಿ, ನಾಯಿ ಕಿವಿ ಇದನ್ನೆಲ್ಲಾ ಇಟ್ಟು ರಿಪೇರಿ ಮಾಡುವವರು ಯಾರಾದರೂ ಬೆಂಗಳೂರಿನಲ್ಲಿರುವರೇ ? ಯಾರಾದರೂ ನಿಮ್ಮ ಹತ್ತಿರ ಬಂದು ತಮ್ಮ ಅಹವಾಲನ್ನು ನಿಮ್ಮ ಮುಂದಿಟ್ಟು "ನಿಮ್ಮ ಕಿವಿ ಸ್ವಲ್ಪ ಕೊಡಿ" (Lend me your ears) ಎಂದಿದ್ದರೆ ಸರಕ್ ಅಂತ ನಿಮ್ಮ ಕಿವಿಗಳನ್ನು ಕಿತ್ತು ಕೊಡಬಹುದಾಗಿತ್ತು ! ಈ ತರಹ ಕಿವಿ ಕೊಡುವ ಯೋಜನೆ ರಾಜಕೀಯ ಪಟುಗಳಿಗೆ ಎಷ್ಟು ಉಪಯೋಗವಾಗುತ್ತಿತ್ತು ? ಅವರು ತಾನೇ ಎಷ್ಟು ಕಿವಿ ಕೊಡಬಹುದಾಗಿತ್ತು ? (–ರೇಷನ್ ಕಾರ್ಡಿನ ಮೇಲೆ !)

ಕನ್ಯಾದಾನ, ಗೋದಾನ, ಭೂ (ತ) ದಾನ ಇತ್ಯಾದಿ ದಾನಗಳನ್ನು ಮಾಡು ವಂತೆ ಕಿವುಡರು ಈ ಜನ್ಮದಲ್ಲಾದರೂ ಕಿವಿಗಳನ್ನು ಸ್ಪೇರ್ ಪಾರ್ಟ್ಸ್ ಅಂಗಡಿಯಲ್ಲಿ ಕೊಂಡು ದಾನಮಾಡಿ ಅದರ ಪುಣ್ಯದಿಂದ ಮುಂದಿನ ಜನ್ಮದಲ್ಲಾದರೂ ಕಿವಿ ಪಡೆಯು ಬಹುದಲ್ಲವೇ, ಚಿನ್ನದಿಂದ ಮಾಡಿದ ಕಿವಿಯನ್ನಾಗಲೀ, ಇಲ್ಲವೇ ಕಂಚಿನಿಂದ ಮಾಡಿದ ಕಿವಿಯನ್ನಾಗಲೀ, ಇಲ್ಲ ಮಣ್ಣಿನಿಂದ ಮಾಡಿದ ಕಿವಿಯನ್ನಾಗಲೀ, ಇಲ್ಲ ಕಡೆಪಕ್ಷ ಲೇಖನ ರೂಪದಲ್ಲಿಯಾದರೂ ಕಿವಿದಾನ ಕೊಟ್ಟರೆ ಒಳ್ಳೆಯದೆಂದು ಯಾರಾದರೂ ಮುನಿಪುಂಗವರು ಹೇಳಿದ್ದರೆ (ನಾನು ಹೇಳುವ ಬದಲು!) ಎಷ್ಟು ಗಣನೀಯ ವಾಗುತ್ತಿತ್ತು!

ಕಣ್ಣಿಗೆ ಕೊಟ್ಟಂತೆ ಕಿವಿಗೂ ಏಕೆ ರೆಪ್ಪೆ ಕೊಡಲಿಲ್ಲ. ಕಣ್ಣು ಮುಚ್ಚಿಕೊಳ್ಳು ವಂತೆ ಕಿವಿಯನ್ನೂ ಮುಚ್ಚಿಕೊಳ್ಳಬಹುದಾಗಿತ್ತು. ಕಿವಿಗೆ ರೆಪ್ಪೆಗಳಿದ್ದಿದ್ದರೆ ಹರಿಶ್ಚಂದ್ರ ಸತ್ಯ ಹರಿಶ್ಚಂದ್ರನಾಗುತ್ತಿದ್ದನೇ ? ನಮ್ಮ ಆಫೀಸರ್‌ಗಳು ನಮಗೇನಾದರೂ ಬಯ್ಯು ತ್ತಿದ್ದರೆ ಕಿವಿಯ ರೆಪ್ಪೆಗಳನ್ನು ಮುಚ್ಚಿಕೊಂಡು ಎಮ್ಮೆ ಮೇಲೆ ಮಳೆ ಹೊಯ್ದಂತೆ ತಟಸ್ಥ ನೀತಿಯನ್ನು ವ್ಯಕ್ತಪಡಿಸಿ, ಆರಾಮವಾಗಿರಬಹುದಾಗಿತ್ತು.

ನಮ್ಮ ಕಿವಿಯನ್ನು ಆನೆ ಕಿವಿಯಂತೆ ತೆಳ್ಳಗೆ ದೊಡ್ಡದಾಗಿ ಮಾಡಿದ್ದಿದ್ದರೆ ಸೆಖೆ ಕಾಲದಲ್ಲಿ ಗಾಳಿ ಬೀಸಿಕೊಳ್ಳಬಹುದಾಗಿತ್ತು. ಬೆಂಗಳೂರಿನ ಕೆಲವು ತರುಣರು ಸಣ್ಣ ಟ್ರಾನ್-ಸಿಸ್ಟರ್ (Transister) ನ ಬೆಂಡೋಲೆಯಂತೆ ಕಿವಿ ಹಿಂದೆಯೇ ಜಂಟಿಸಿ ಕೊಳ್ಳಬಹುದಾಗಿತ್ತು! ಬ್ರಹ್ಮನಿಗೆ ಇಷ್ಟೂ ತಿಳಿಯದೇ ಇರುವುದು ಸೋಜಿಗವಲ್ಲವೇ!

ಎಡಕಿವಿ ಅಶುದ್ಧ. ಬಲಕಿವಿ ಪವಿತ್ರವಂತೆ. ಬೆಂಗಳೂರಿನ ದೇವಸ್ಥಾನಗಳಿ ಗೆಲ್ಲಾ ಎರಡೆರಡು ಬಲಕಿವಿಗಳನ್ನೇ ದೊಡ್ಡದಾಗಿ ಮಾಡಿಸಿ ಲಗತ್ತಿಸಿದರೆ ಪಾವಿತ್ರ್ಯ ಕಾಯ್ದುಕೊಳ್ಳಬಹುದೇ ? ಹಾಗೆಯೇ ಜನತೆಯ ಕೂಗು ಕೇಳಲೆಂದು ವಿಧಾನಸೌಧದ ಕೆಲವು ಕೊಠಡಿಗಳಿಗೂ, (ಕಾರ್ಪೊರೇಸನ್) ಆಫೀಸ್ ಕೊಠಡಿಗಳಿಗೂ ಕಿವಿಗಳನ್ನು ಯಾರಾದರೂ "ಕಿವಿಯಿಸ"ಬಾರದೇ. Walls have ears—ಆದ್ದರಿಂದಲೇ ಹಾಗೆ ಮಾಡುವುದರಲ್ಲಿ ತಪ್ಪೇನು!

ಅಂತ ಯೋಚಿಸುತ್ತಿದ್ದಾಗ ಬಸ್ ಕಂಡಕ್ಟರ್ ತನ್ನ ತಗಡಿನ ಎಂಟ್ರಿ ಕಾರ್ಡನ್ನು ಹಾರಿಜಾಂಟಲ್ ಆಗಿ ನನ್ನ ಕಿವಿಯನ್ನೇ ಮೇಯುವಂತೆ (Grazing) ಸೆಳೆದು ಕೊಂದು ನನ್ನ ಕಿವಿಗೇ ಸ್ವಲ್ಪ ಜಖಂ ಮಾಡಿ, "ಮೆಂಟಲ್ ಆಸ್ಪತ್ರೆ ಬಂತೂರೀ ಇಳಿದು ಹೋಗ್ರಿ. ಈ ಬಸ್ಸು ರಿಟರ್ನ್ ಟ್ರಿಪ್ ಹೋಗುತ್ತೆ. ಇಳೀರಿ ಕಿವಿ ಕೇಳಿ ಸೊಲ್ವೆ, ಹೋಗಿ ಕಿವಿಡಾಕ್ಟ್ರ ಹತ್ರ ರಿಪೇರಿ ಮಾಡ್ಸಿ" ಅಂತ ಜೋರಾಗಿ ಒದರಾ ಡೋಣವೇ.

ಎಲ ಎಲಾ. ನನ್ನ "ಕಿವಿ ವಿಷಯ" ಇವನಿಗೆ ಹೇಗೆ ತಿಳೀತು 'ಅಂತ ಬೆರಗಾಗಿ, "ನನ್ನ ಕಿವಿ ರಿಪೇರಿ ಮಾಡೋ ಡಾಕ್ಟ್ರು ಇನ್ನೂ ಹುಟ್ಟಿಲ್ಲಪ್ಪಾ!" ಎನ್ನುತ್ತಾ ಬಸ್ಸಿ ಳಿದು ಹೋದೆ—ನನ್ನ ಕಿವಿ ತುರಿಸುತ್ತಾ!

ದುಡ್ಮಾಡೋ ಜನ

ದುಡ್ಮಾಡೋ ಜನ ಅದ್ಹೆಂಗೊ ।
ದುಡ್ಮಾಡ್ತಾನೇ ಇರ್ತವ್ರೆ ॥
ದುಡ್ಡಿಗ್ದುಡ್ಡು ಗಂಟ್ಹಾಕ್ತಾರೆ ।
ದುಡ್ಡಿನ್ಮ್ಯಾಗ್ನೆಟ್ ಹಿಡಿದವ್ರೆ ॥ ೧ ॥

ಅಂಥೋರ್ಮಕ್ಕಳು ಹುಟ್ಟೋವಾಗ ।
ಹೊಕ್ಕಳಬಳ್ಳಿ ಕತ್ತರಿಸ್ದಾಗ ॥
ಅಂಗೈ ಹಿಂಗೈ ಹೊಸೀತವೆ ।
ದುಡ್ಡಿನ್ಗಂಧ ಹಿಡೀತವೆ ॥ ೨ ॥

ಹಿತ್ತಲಲ್ಲಿಷ್ಟು ಬ್ಯಾಂಕಿನಲ್ಲಿಷ್ಟು ।
ಚಿನ್ನ ವಜ್ರ ಪಚ್ಚೆಗಿಷ್ಟು ।
ಭೂಮಿಗಿಷ್ಟು ಕಾಣೆಗಿಷ್ಟು ।
ಇಷ್ಟೊ ಅಷ್ಟೊ ಇಟ್ಬಿಡ್ತವೆ ॥ ೩ ॥

ಇಟ್ಮೇಲ್ನೋಡಿ ಅವರ ಮೋಜ್ನ ।
ಇಲ್ಲಿ ಅಲ್ಲಿ ಸುತ್ತಾಡೋದ್ನ ॥
ಲೆಕ್ಕ ಹೆಂಗೆ ಬರೆಯೋದಂತ ।
ಅಕ್ಕ ಪಕ್ಕ ಕೇಳ್ತಾರೆ ॥ ೪ ॥

ಅವರಿಗೆ ಮಕ್ಕಳು ಆಗೋವಾಗ ।
ಹೊಕ್ಕಳ ಬಳ್ಳಿ ಕತ್ತರಿಸ್ದಾಗ ॥
ಒಂದೋ ಎರಡೋ ಅಂಥೋರ್ಮಕ್ಕಳು ।
ಅಂಗೈ ಬಿಡಿಸಿ ನೋಡ್ತವೆ ॥ ೫ ॥

ಟೆರಿಲಿನ್ ಗಿರಿಲನ್ ಹಾಕ್ಕೊಂಡವ್ರು ।
ಟ್ರಾನ್ಸಿಸ್ಟರ್ನ ಎತ್ತೀಕೊಂಡು ॥
ಕ್ಯಾಮರ ಒಂದನ ತೋಳಲಿ ತೂಗಿ ।
ಚೆಲಚೆಲ್ಲಾಗೇ ಹಣ ಚೆಲ್ತಾರೆ ॥ ೬ ॥

ಹೊಕ್ಕಳ ಬಳ್ಳಿಯು ಸುರಳಿದರೆ ಇತ್ತ ।
ದುಡ್ಡಿಗಿಡ್ದು ಗಂಡ್ದವಾಗ್ತದೆ ॥
ಹೊಕ್ಕಳ ಬಳ್ಳಿಯು ತಿರುವಿದರತ್ತ ।
ದುಡ್ಡಿನ ಗೋರಿಯು ಕಟ್ತಾದೆ ॥ ೭ ॥

—ಹೆಚ್. ಎಸ್. ರಾವ್

ಅದು ಆದದ್ದು ಹೀಗೆ

ಹುಡುಗತನದಿಂದ ಬೈದಂಗಳದ ನಾಗಪ್ಪನಿಗೆ ಪದ್ಯ ಬರೆಯೋದು ಅಂದರೆ ಖಯಾಲಿ. ವೆಂಕ ಬಂದ–ಏನು ತಂದ=ತಂಬಿಗೆ ತಂದ–ಯಾವ ತಂಬಿಗೆ=ಬೆಳ್ಳಿ ತಂಬಿಗೆ–ಯಾವ ಬೆಳ್ಳಿ=ಮೂಡಲ ಬೆಳ್ಳಿ–ಯಾವ ಮೂಡಲ=ನಾಗರ ಮೂಡಲ–ಯಾವ ನಾಗರ=ನಾಗಪ್ಪನ ನಾಗರ–ಅಂತ ಪದ್ಯ ಬರೆಯುಕ್ಕೆ ಶುರು ಮಾಡಿದ. ೧೨ ವರ್ಷ ಆದಾಗ ಆಕಾಶದಲ್ಲಿ ಬುಟ್ಟಿಯೊಂದು ತೇಲುತ್ತಿತ್ತು–ನೋಡದಂತೆ ದೂರಕದು ಕಾಣುತ್ತಿತ್ತು ಎನ್ನುವ ಮಟ್ಟಿಗಾದ. ೧೮ ವರ್ಷಗಳಾದಾಗ "ಅಲ್ಲಿ ನೋಡಿ ಕಾಣು ತಿಹುದು–ಬೂದಿ ತುಂಬಿದ ತಿಪ್ಪೆ–ಪೌಡರನ್ನು ಬಳಿದು ನಿಂತ ಹೆಣ್ಣಿನಂತೆ ಸಪ್ಪೆ"– ಎಂದು ಪದ್ಯ ಬರೆದ, ಮನೆಯವರೆಲ್ಲರೂ ನಮ್ಮ ಹುಡುಗ ಕವಿಯಾಗ್ತಾನೆ. ನಮ್ಮ ವಂಶಕ್ಕೇ ಟೋಪಿಪ್ರಾಯನಾಗಂತ್ತಾನೆ ಎಂದು ಸಂತೋಷಪಟ್ಟರು.

ಈ ಸಂತೋಷದಲ್ಲಿ ನಾಗಪ್ಪನ ಅಪ್ಪ ಗೊಟಕ್ಕಂದ. ಒಬ್ಬನೇ ಮಗ. ಆಸ್ತಿ ಯೆಲ್ಲಾ ಕೈಗೆ ಸಿಕ್ಕಿತು ಕವಿಯಾಗಬೇಕೆಂದವನಿಗೆ ಇನ್ನೇನೂ ಅಡ್ಡಿ ಆತಂಕಗಳಿಲ್ಲವಲ್ಲಾ ಹಗಲೂ ರಾತ್ರಿ ಬರೆದಿದ್ದೂ ಗೀಚಿದ್ದೇ.

ಬೈದಂಗಳದ ಹುಡುಗರೆಲ್ಲರೂ ನಾಗಪ್ಪನಿಗೆ ಕುಮ್ಮಕ್ಕೂ ಕೊಟ್ಟಿದ್ದೂ ಕೊಟ್ಟಿದ್ದೇ. ಒಂದು ಸಿಹಿ, ಒಂದು ಖಾರ, ಒಂದು ಕಾಫಿ ಕೊಟ್ಟು ನಾಗಪ್ಪ ತನ್ನ "ಕವನ ವಾಚನ" ಮಾಡಿದರೆ. ೧೮–೨೦ ಹುಡುಗರು ಕಿಕ್ಕಿರಿದು ತುಂಬುತ್ತಿದ್ದರು. "ಬಹಳ ಚೆನ್ನಾಗಿದೆ, ಗವಂಕಿಗಳ ಬಾಯಲ್ಲಿ ಈ ಕವನಗಳು ಬಂದರೆ, ಮದುವೆ ವಯ ಸ್ಸಿನ ಹುಡುಗಿಯರೆಲ್ಲಾ ನಿನ್ನ ಕಂಡು ಬಾಯಿ ಬಿಡುತ್ತಾರೆ" ಎಂದು ಸ್ನೇಹಿತರು ಹೊಗಳುತ್ತಿದ್ದರು.

ಎರಡು ಸಿಹಿ, ಎರಡು ಖಾರ, ಒಂದು ಭಾತು ಒಂದು ಕಾಫಿ, ಬೀಡ ಕೊಟ್ಟರೆ, ಆ ದಿನದ ಕವನ ವಾಚನಕ್ಕೆ ೩೦–೪೦ ಜನರು ನೆರೆಯುತ್ತಿದ್ದರು. "ಭಾರತದ ಹದಿಮೂರು ಇತರ ಭಾಷೆಗಳಿಗೂ, ಹಾಗೂ ಪ್ರಪಂಚದ ಎಂಕ್ಕೆಷ್ಟು ಸಾವಿರ ಭಾಷೆಗ ಳಿಗೂ ತರ್ಜುಮೆ ಮಾಡಬೇಕು" ಎಂದು ನಾಗಪ್ಪನನ್ನು ಎಲ್ಲರೂ ಹುರಿದುಂಬಿಸು ತ್ತಿದ್ದರು.

" ಇದೊಂದು ಸಣ್ಣ ಕೊಂಪೆ. ಬೈದಂಗಳದಲ್ಲಿ ಕುಳಿತು ಏನು ಮಾಡ್ತಿ. ನಾಗಪ್ಪಯ್ಯ ! ಪಟ್ಟಣಕ್ಕೆ ಹೋದರೆ ಬಾಳಬಹುದು. ಅಲ್ಲಿ ನಿನ್ನ ಯೋಗ್ಯತೆಯನ್ನು ಗುರುತಿಸುವ ಮಂದಿ ಬಹಳ ಇರುತ್ತಾರೆ, ರಾಜಧಾನಿಗೆ ಹೋಗಿ ಕವನ ಮಂದಿರ ಅಂತ ಒಂದು ದೊಡ್ಡ ಹಜಾರವನ್ನು ಬಾಡಿಗೆಗೆ ತೆಗೆದುಕೊ. ಅಲ್ಲಿ ಇಂತಹ ಹೊತ್ತಿನಲ್ಲಿ ಇಂತಿಂತಹ ಕವನ ವಾಚನ ಅಂತ ಏರ್ಪಾಡು ಮಾಡು " ಎಂದು ನೆಚ್ಚಿನ ಗೆಳೆಯ ಸುಬ್ಬರಾಯ ಉಪದೇಶ ಮಾಡಿದ.

ರಾಜಧಾನಿಗೆ ನಾಗಪ್ಪ ಬಂದ. ಜತೆಯಲ್ಲೇ ಸುಬ್ಬರಾಯ. ಆಂಜನೇಯನ ಗುಡಿಯ ಪಕ್ಕದಲ್ಲಿದ್ದ ದೊಡ್ಡ ಹಜಾರವನ್ನು ಬಾಡಿಗೆಗೆ ತೆಗೆದುಕೊಂಡರು, ಕವನ ವಾಚನದ ಜಾಹೀರು ಚೀಟಿಗಳನ್ನು ಹಂಚಿದರು. ವಿಫಲವಾಗಿ ಹಂಚಿದರು.

ಮೂರು ದಿನ ಆದರೂ ಜನ ಬರಲೇ ಇಲ್ಲ.

" ಏನಯ್ಯ ! ಸುಬ್ಬರಾಯ ! ಹೀಗಾಯ್ತಲ್ಲ " ಎಂದ ನಾಗಪ್ಪ, " ನಮ್ಮೂರಿನಲ್ಲಿ ಕವನ ವಾಚನಕ್ಕೆ ಅಷ್ಟು ಜನ ಗಿರಕಾಯಿಸುತ್ತಿದ್ದರು. ಇಲ್ಲೂ ಅದೇ ತರಹ ಯಾಕೆ ಆಗಲಿಲ್ಲ ಎಂದು ಆಗಲೇ ಯೋಚಿಸಿದೆ. ಬಂದವರಿಗೆ ಒಂದು ಬಟ್ಟಲು ಕಾಫಿ ಕೊಟ್ಟರೆ ಜನ ಸೇರಬಹುದು " ಎಂದ ಸುಬ್ಬರಾಯ. ಆಗಬಹುದು ಎಂದ ನಾಗಪ್ಪ.

ಕಾಫಿ ವಾಸನೆ ಹಜಾರದಿಂದ ಹೊರಟಾಗ, ಜನ ಬರುಕ್ಕೆ ಶುರು ಮಾಡಿದರು. ಬಂದವರಿಗೆ ಕಾಫಿ ಹಂಚುವ ಕೆಲಸದಲ್ಲೇ ನಿರತನಾದ ನಾಗಪ್ಪನಿಗೆ ಕವನ ಓದಲು ವ್ಯವಧಾನ ಸಿಗಲಿಲ್ಲ. ಬರುವವರ ಸಂಖ್ಯೆ ಸಂತೆಯಷ್ಟಾಯಿತು. ಕಾಫಿಗೆ ಆರು ಪೈಸೆ ಎಂದು ಸುಬ್ಬರಾಯ ಬಾಗಿಲಲ್ಲಿ ಬೋರ್ಡ್ ಹಾಕಿ ಕುಳಿತ. ಕವನ ಹಾಡ್ತಾ ಕಾಫಿ ಮಾಡಿ ಹಂಚುಕ್ಕೆ ನಾಗಪ್ಪ ನಿಂತ,

ಮೂರೇ ತಿಂಗಳಲ್ಲಿ ಹಾಡಿನ ಹಿನ್ನೆಲೆಯಲ್ಲಿ ವಡೆ ಸಾಂಬಾರು. ಪೂರಿ ಪಲ್ಯ. ದೋಸೆ ಇಡಲಿ ಶುರುವಾಯಿತು, ಬೈದಂಗಳದಿಂದ ಜನರನ್ನು ಕರೆಸಿಕೊಂಡರು.

ಈಗ ಅಡಿಗೆ ಮನೆಯಲ್ಲಿ ನಾಗಪ್ಪ ಕವನಗಳನ್ನು ಕಟ್ಟುತ್ತಾ ತಿಂಡಿ ಮಾಡುತ್ತಾನೆ. ಮಾಣಿಯೊಬ್ಬ ಕವನಗಳನ್ನು ಬರೆದಿಡುತ್ತಾನೆ. ಪುಸ್ತಕ ಅಚ್ಚು ಹಾಕಿಸುತ್ತಾರೆ ಆ ಪುಸ್ತಕದ ಹಾಳೆಗಳಲ್ಲಿ ತಿಂಡಿ ಕಟ್ಟಿ ಸರಬರಾಜು ಮಾಡುತ್ತಿದ್ದಾರೆ. ಬದುಕಿ ಬಾಳಿದರು ನಾಗಪ್ಪ. ಮತ್ತು ಸುಬ್ಬರಾಯ.

—ಕುಮಾರ್

ಆಲೆ ಮನೆ ದೆವ್ವ

ಕಬ್ಬಿನ ಗಾಣ ಆಡಿ ಹಾಲು ತೆಗೆದು, ಆ ಹಾಲನ್ನ ಆಲೆ ಮನೇಲಿ ಕುದಿಸಿ, ಬೆಲ್ಲ ತಯಾರ್ಮಾಡ್ತಾರಲ್ಲ! ಅಂತಹ ಆಲೇಮನೇಲಿ ದೆವ್ವ ಬಂದು ಸೇರಿಕೊಂಡು ಬಿಡುತ್ತಂತೆ ಆ ಹಾಳು ದೆವ್ವವೋ ಕಿರುಕುಳ ಕೊಡೋ ದೆವ್ವ, ಮಲ್ನಾಡು ತೋಟಗಳ ಚೌಡಿ ತರಹ ಗಪ್ಪಂತ ಹಿಡಿದುಕೊಂಡು, ಗೆರೆ ದಾಟಿದರೆ ಕತ್ತು ಹಿಸುಕಿ ಮುಗಿಸಿ ಬಿಡೋದಿಲ್ಲ. ಹುಣಿಸೆ ಮರದ ಬ್ರಹ್ಮ ರಾಕ್ಷಸನ ತರಹ ಅದುಮಿಕೊಂಡು ಗೋಣು ಮುರಿಯೋದಿಲ್ಲ ಅಥವಾ ಬೆಳದಿಂಗಳ ಮೋಹಿನಿ ತರಹ ಸೆಳೆದುಕೊಂಡು ಅಪ್ಪಿ ಜೀವವನ್ನೆಲ್ಲ ಹಿಂಡಿ ಹಿಪ್ಪೆ ಚರಟ ಮಾಡೋದಿಲ್ಲ. ಆಲೆ ಮನೆ ದೆವ್ವ ಒಲೆಗೆ ಅಟ್ಟಿದ್ದ ಕಬ್ಬಿನ ಸಿಪ್ಪೇನ ಒದ್ದೆ ಮಾಡಿಬಿಡುತ್ತೆ. ಬೆಂಕಿ ಧಗ ಧಗ ಅಂತ ಉರಿಯೋದೂ ಇಲ್ಲ. ತೆಪ್ಪಗೆ ಆರಿ ಹೋಗೋದೂ ಇಲ್ಲ. ಅಂದರೆ ಬೆಲ್ಲದ ಪಾಕ ಬೇಗ ಇಳಿಯುಲ್ಲ. ಒಲೇ ಹತ್ತಿರವೇ ಕೂತುಕೊಂಡು ಬೆಂಕಿ ಧಗ ಧಗ ಅಂತ ಉರಿಯೋ ಹಾಗೆ ಮಾಡಿದರೆ ಆಗ ಯಾವುದೊ ಮಾಯದಲ್ಲಿ ಪಾಕದ ದೊಡ್ಡ ಬಾಂಡ್ಲೆಯನ್ನೇ ಉರುಟಿಸಿ ಬಿಡುತ್ತೆ. ಆಗ ಅರ್ಧ ಕುದ್ದಿದ್ದ ಬೆಲ್ಲದ ನೀರು ಪಾಕ ಸುತ್ತ ಮುತ್ತಲೂ ಇದ್ದವರ ಮೇಲೆಲ್ಲ ಬಿದ್ದು, ಸುಟ್ಟಗಾಯವಾಗುತ್ತೆ. ಆ ಪಾಕ ಒಲೇಗೂ ಹರಿದು ಬೆಲ್ಲ ಸುಟ್ಟ ಸಿಹಿವಾಸನೆ ಆಲೆ ಮನೆ ತುಂಬಾ ತುಂಬಿಕೊಳ್ಳುತ್ತೆ. ಹೊಗೇನೂ ತುಂಬಿಕೊಳ್ಳುತ್ತೆ. ಉಸಿರಾಡುವುದಕ್ಕೇ ಕಷ್ಟವಾಗಿ ಎಲ್ಲರೂ ಹೊರಕ್ಕೆ ಓಡಿಬರಬೇಕಾಗುತ್ತೆ. ಆಗ ದೆವ್ವಕ್ಕೆ ಹೆಂಡ ಕುಡಿಸಿದ ಹಾಗೆ. ಆಲೇ ಮನೇಲಿ ರಾದ್ಧಾಂತ ಮಾಡಿಬಿಡುತ್ತೆ. ಬಾಂಡಲೆಯನ್ನ ಡಬರುಹಾಕಿ ಬಿಡುತ್ತೆ. ಒಲೇನ ಮುಚ್ಚಿಬಿಡುತ್ತೆ. ಕಬ್ಬಿನ ಹಾಲನ್ನ ಚೆಲ್ಲಿಬಿಡುತ್ತೆ. ಅದಕ್ಕೇನೆ ಆಲೆ ಮನೆಯವರು ಹಾಲು ಕಾಯಿಸುಕ್ಕೆ ಶುರು ಮಾಡಿದ ಮೇಲೆ, ಏನೇ ಆಗಲಿ, ಬೆಲ್ಲದ ಪಾಕಾನ ಅಚ್ಚುಗಳಿಗೆ ಹುಯ್ಯೋತನಕ. ಹೊಗೆಯೇ ಬರಲಿ ಬೆಂಕಿಯೇ ಬೀಳಲಿ, ಅಲ್ಲೇ ಇದ್ದು ಕೆಲಸ ಮುಗಿಸಿಯೇ ಹೋಗುತ್ತಾರೆ. ಅವರಿಗೂ ಗೊತ್ತು! ಆಲೆ ಮನೆ ದೆವ್ವ ಎಷ್ಟು ರೇಗಿದರೂ ಪ್ರಾಣ ತೆಗೆಯೋದಿಲ್ಲ, ಕೈ ಕಾಲು ಮುರಿಯೋದಿಲ್ಲ. ಕಿರುಕುಳ ಕೊಟ್ಟು ನಷ್ಟ ಮಾಡುತ್ತೆ. ಮನಸ್ಸಿಗೆ ಕಿರಿಕಿರಿ ಮಾಡುತ್ತೆ. ಗಾದೆ ಅಳಿಯನ ತರಹ. ಎದ್ದು ಊಟ ಮಾಡೋದೂ ಇಲ್ಲ. ತೆಪ್ಪಗೆ ಬಿದ್ದು ಮಲಗೋದು ಇಲ್ಲ.

ಕಿರಿಕಿರಿ ಹೆಚ್ಚಾದಾಗ ಆಲೆ ಮನೆಯವರು ಮಂತ್ರವಾದೀನ ಕರೆಸಿ ಪೂಜೆ ಹಾಕಿಸ್ತಾರೆ. ಆ ಮಂತ್ರವಾದೀನೋ ಬೇವಿನ ಸೊಪ್ಪಿನ ಪರಕೆ ತೊಕೊಂಡು ಹ್ರಾಂ

ಹ್ರೀ ಮಾಡುತ್ತ ಆಲೆ ಮನೆಲೆಲ್ಲಾ ಬಾರಿಸ್ತಾನೆ. ಅವನು ಎಲ್ಲೆಲ್ಲಿ ಬಾರಿಸ್ತಾನೋ ಅಲ್ಲಿಂದೆಲ್ಲ ಕುಯ್ಯೋ ಮರ್ರೊ ಅಂತ ಕೂಗಿಕೊಳ್ಳುತ್ತಾ ದೆವ್ವ ಓಡಿ ಹೋಗುತ್ತೆ. ಆದಕ್ಕೇ ಮಂತ್ರವಾದಿ ಆಲೆ ಮನೆಯನ್ನೆಲ್ಲಾ ಒಂದು ತುದಿಯಿಂದ ಬೇವಿನ ಪೊರಕೇಲಿ ಬಡಿದು ಗುಡಿಸಿದಂತೆ ಮಾಡಿ ಬಾಗಿಲಿಗೆ ಕೊನೇಗೆ ಬರ್ರಾನೆ. ಅಲ್ಲಿ ಹೊಸಿಲಿನ ಮೇಲೆ ದೆವ್ವ ಕೂತಿರುತ್ತೆ. ಅದಕ್ಕೆ ತನ್ನ ಮನೇನ ಬಿಟ್ಟು ಹೋಗುಕ್ಕೆ ಇಷ್ಟವಿಲ್ಲ. ಆದರೂ ಹೋಗಲೇಬೇಕು. ಅಳಿಯನ ಮನೆಗೆ ಬಂದ ಅತ್ತೆಯ ತರಹ ಅಲ್ಲೇ ಕೂತಿರುತ್ತೆ. ಆಗ ಮಂತ್ರವಾದಿ ರಭಸದಿಂದ ಬೇವಿನ ಪೊರಕೇನ ಹೊಸಿಲಿಗೆ ಝಾಡಿಸ್ತಾನೆ. ಆಗ ದೆವ್ವ ಓಡಿಹೋಗುತ್ತೆ.

ಸಧ್ಯ ! ಇನ್ನು ಸುಖವಾಗಿರಬಹುದಲ್ಲಪ್ಪ, ಅಂತ ಎಲ್ಲರೂ ಆಲೆ ಮನೆಗೆ ಬರ್ರಾರೆ ಆಗ ಮೇಲುಗಡೆ ಗವಾಕ್ಷೀಲಿ ಏನೋ ಸದ್ದಾಗುತ್ತೆ. ನೋಡಿದರೆ ಆಲೆಮನೆ ದೆವ್ವ ! ಹೋದೆಯಾ ದೆವ್ವ ಅಂತಿದ್ದರೆ, ಗವಾಕ್ಷೀಲಿ ಬಂದೆ ಅಂತ ಅನ್ನುತ್ತೆ.

ಹಾಗೇ ಆಯಿತು ನೋಡಿ. ನಮ್ಮ ದೇಶದಲ್ಲಿ ಕೂಡ, ರಾಣ್ ಆಫ್ ಕಚ್‌ನಲ್ಲಿ ದೆವ್ವದ ಕಿರುಕುಳ ಉಂಟಾಯ್ತು. ಬೇವಿನ ಪೊರಕೆ ಹಿಡಿದು ಹೊಡೆಯೋಣ ಅನ್ನೋ ಹೊತ್ತಿಗೆ ಮಂತ್ರವಾದಿ ಹೊರಗಿಂದ ಬಂದ. ನಾನು ಓಡಿಸ್ತೀನಿ ಅಂತಂದ. ಸರೀಪ್ಪಾ ಅಂದೆವು. ಅಲ್ಲಿಂದ ಓಡಿಹೋಯ್ತು ದೆವ್ವ.

ಮನೆಗೆ ಬಂದೆವು. ಪೀಡೆ ಕಳೀತು ಅಂತ. ಆದರೆ ಆ ದೆವ್ವ ಏನು ಮಾಡಿತು ? ಗವಾಕ್ಷಿ ಹತ್ತಿರ ಬಂದು. ಇಲ್ಲಿದೀನಿ ನಾನು, ಅಂತ ಕಿರುಕುಳ ಕೊಡುಕ್ಕೆ ಶುರು ಮಾಡಿತ್ತು. "ಲೇ ! ಆಲೆ ಮನೆ ದೆವ್ವ. ನಿನ್ನ ಹಿಡಿದು, ಮಂತ್ರದ ಮಳೇನ ಜಡಿದು, ನಿನ್ನ ಹುಟ್ಟು ಅಡಗಿಸಿ ಬಿಡ್ತೀವಿ." ಎಂದು ನಾವು ಕೂಗಿ ಎಚ್ಚರಿಕೆ ಕೊಟ್ಟೆವು ಬೇವಿನ ಪೊರಕೇನ ಮಡಿಕೋಲಿಗೆ ಕಟ್ಟಿ, ಗವಾಕ್ಷಿ ಹತ್ತಿರ ಝಾಡಿಸುಕ್ಕೆ ಶುರು ಮಾಡಿದೆವು. ಆಗ ಅದೇನಂತು ಗೊತ್ತೆ ?

"ನಾನು ಆಲೆ ಮನೆ ದೆವ್ವಾನೇ ಅಲ್ಲ. ನಾನು ಹೋಗಿಯೇಬಿಟ್ಟಿದ್ದೇನೆ. ಆದರೆ ಇಲ್ಲಿರೋದು ನಿಮ್ಮನೇಲಿ ಸಾಕಿದ ದೆವ್ವಾನೇ ! ಅದು ನಾನಲ್ಲ" ಅಂತ ಎಷ್ಟು ಮಣಿ ಮಣಿಯಾಗಿ ಹೇಳ್ತು ಅಂತ.

ಅದೂ ದಿಟವೇ, ನಮ್ಮನೇಲಿ ಈ ಆಲೆ ಮನೆ ದೆವ್ವಾನ ಸಾಕಿಕೊಂಡಿದ್ವಿ. ಈಗ ಹೊರಗೆ ಹೋಗಿ ಹತ್ತು ಹದಿನೆಂಟು ವರ್ಷಗಳಾಯಿತು. ಈಗ ಗವಾಕ್ಷೀಲಿ ಇಣಿಕಿ ನೋಡ್ತಾ ಇದೆ.

ಬೇವಿನ ಪೊರಕೇನ ಹಿಡಿದು ಝಾಡಿಸಲೇಬೇಕು !

ಚಮ್ಮಾರನ ದೇವರಿಗೆ ಚಪ್ಪಲಿಯ ಹಾರ ಎಂದು ಒಂದು ಸುಂದರ ಗಾದೆ ಇದೆ. ಹೂವಿನ ಹಾರ ಒಪ್ಪಲ್ಲ.

ವೀರಣ್ಣ ಮತ್ತು ಹುರಿಗಡ್ಲೆ

ವೀರಣ್ಣನ ಇತಿಹಾಸವನ್ನು ಅಲ್ಪಸ್ವಲ್ಪ ಓದಿರಬಹುದಾದ ವಾಚಕ ಮಹಾಶಯರನ್ನು ವೀರಣ್ಣ ಹೇಗಿದ್ದ ? ಅಥವಾ ಇದ್ದಾನೆ ಎಂದು ಕೇಳಿದರೆ ಅವರು ತಲೆ ಕೊಡವಬಹುದು. ತಮ್ಮ ಕಥಾನಾಯಕನ ದೇಹಸೌಷ್ಠವ, ಮುಖಭಾವ ಮತ್ತು ಉಡುಪುಗಳನ್ನು ಅನೇಕ ಪುಟಗಳಷ್ಟು ವರ್ಣಿಸುವ ಸ್ವಭಾವ ಕನ್ನಡದ ಎಲ್ಲ ಲೇಖಕರಿಗೂ ಇದ್ದರೂ ಆರಾಸೇಗೆ ಇಲ್ಲ. (ಆದುದರಿಂದಲೇ ಅವನು ಬರೆದ ಕಾದಂಬರಿಗಳು ಬುಕ್‌ಸ್ಟಾಲುಗಳನ್ನಲಂಕರಿಸಿಲ್ಲ; How nice !) ಎಂದು ಅವರು ಹೇಳುತ್ತಾರೆ.

ಆದುದರಿಂದ ನಾವು ಮಾಡಿದ ತಪ್ಪನ್ನು ಈಗ ಸರಿಪಡಿಸಿಕೊಳ್ಳುತ್ತಿದ್ದೇವೆ. Now, ಈ ವೀರಣ್ಣ (alias ದುಬ್ಬೀರ್ಣ) ಎನ್ನುವವನು ತನ್ನ ಕಾಲೇಜು ದಿನಗಳಲ್ಲಿ " ರಾಜ್ ಕಪೂರ್ " ಎಂಬ ಅಡ್ಡ ಹೆಸರನ್ನು ಹೊಂದಿದ್ದ. ರಾಜ್ ಕಪೂರನನ್ನು ನಾವು ಕಾಣೆವೆ. ರಜತ ಪರದೆಯ ಮೇಲೆ ಕಂಡು ಬರುವ ರಾಜ್‌ಕಪೂರ್, ವೀರಣ್ಣನಂತೆ ಗೌರವರ್ಣದ ಶರೀರವನ್ನುಳ್ಳವನೋ ಅಲ್ಲವೋ ನಾವರಿಯೆವು. ರಾಜ್ ಕಪೂರ್‌ನಷ್ಟು ದಪ್ಪಗಿಲ್ಲ ವೀರಣ್ಣ ; ಅವನ ಮುಖದ ಮೇಲಿರುವ ವಿಚಿತ್ರ ಕಳೆ ವೀರಣ್ಣನ ಮುಖದ ಮೇಲಿಲ್ಲ. ವೀರಣ್ಣ ತೆಳ್ಳಗೆ ಮಡಿಕೋಲಿನ ಹಾಗಿದ್ದಾನೆ. ಪೈಜಾಮ ಷರಟು ಹಾಕುತ್ತಾನೆ. ಮೀಸೆ ಬಿಟ್ಟಿದ್ದಾನೆ.

ಇದೆಲ್ಲಾ ಏಕೆ ಹೇಳುತ್ತಿದ್ದೀ ಎಂದು ನೀವು ಕೇಳಿದರೆ ಉತ್ತರ ಹೇಳುವ ಸ್ಥಿತಿಯಲ್ಲಿದ್ದೇನೆ. ಈ ಕತೆ ಅಥವಾ ಪ್ರಸಂಗದ ನಾಯಕಿ ದಕ್ಷಿಣ ಭಾರತದ ಸಿನಿಮಾ ರಂಗದಲ್ಲಿ ತಾರಾ ಮಟ್ಟಕ್ಕೇರಿದ ನವೋದಿತ ಜ್ವಾಜ್ವಲ್ಯಮಾನ ತಾರೆ.

ಅವಳನ್ನು ಮುಗಿಲು ಹಳ್ಳಿಯಲ್ಲಿ " ಹುರಿಗಡ್ಲೆ " ಎಂದು ಕರೆಯುವ ವಾಡಿಕೆ.

ಯೌವನ ತುಂಬಿದ ಸಿರಿಯೊಡಲೇ
ನೀನಿಲ್ಲದಂಥ ಜೀವನ ಕಂಡಲೇ
ಲಾವಣ್ಯ ರಾಶಿಯ ಪಾಲ್ಗಡಲೇ
ಬಾರೆನ್ನ ಕಾರಿಗೆ ಹುರಿಗಡಲೇ

ಎಂಬ ಜನಪ್ರಿಯ ಗೀತೆಯನ್ನು ಕನ್ನಡ ಚಿತ್ರರಸಿಕರು ಎಷ್ಟು ಬಾರಿ ರೇಡಿಯೋದಲ್ಲಿ ಕೇಳಿಲ್ಲ ? ಸಾಹಿತ್ಯದ ಸೋಂಕೂ ಇದರಲ್ಲಿಲ್ಲ. ಆದರೆ ಇದು ಗೀತೆ ಎಂತೆಂತಹ

ಪಾಳ್ಗಬ್ಬಗಳನ್ನೂ ಕನ್ನಡ ವಿಮರ್ಶಕರು ಮಹಾ ಕಾವ್ಯಗಳೆಂದು ಒಪ್ಪಿಕೊಳ್ಳುತ್ತಿರುವಾಗ, ಕೇವಲ ಒಂದು ಕಟ್ಟು ಬೀಡಿಗಾಗಿ ಬರೆದಿರಬಹುದಾದ ಈ ಗೀತೆಯಲ್ಲಿ ಸಾಹಿತ್ಯವನ್ನು ಕಾಣುವ ಸಂಭವವೆಲ್ಲಿಂದ ಬರಬೇಕು.

ಈ ಗೀತೆ ವೀರಣ್ಣನ ಪ್ರಾಣ. ಬರೇ ಅವನೇ ಇಲ್ಲ, ಅವನ ಮಿತ್ರರಾದ ಚಂಬಸ್ಯ, ಬಕ್ಕೇಶಿ, ಪರ್ಮೇಶಿ, ಕಲ್ಲೇಶಿ, ಶಿವಗ, ಜಯ್ಗ್ಯ, ವಾಸ್ಯ, ರಾಯು, ಆಚಾರಿ, ಅಯ್ಯಪ್ಪ ಕಿವಿಗೆ ಬಿದ್ದಕೂಡಲೇ ಮೇಲ್ಕಂಡವರೆಲ್ಲರ ಮನೋರಂಗದಲ್ಲಿ ಹುರಿಗಡಲೆ ನರ್ತಿಸಲಾರಂಭಿಸುವಳು. ತಪ್ಪೇನು ಅದರಲ್ಲಿ ? ಡೆಬ್ಬೀ, ನರ್ಗಿಸ್, ಸಾಧನಾ, ಮೀನಾ ಮೊದಲಾದವರೇ ಇನ್ನೆಷ್ಟು ಕಾಲ ಅವರ ಮನೋರಂಗಗಳಲ್ಲಿರಲು ಸಾಧ್ಯ ?

ಮೊನ್ನೆ ವೀರಣ್ಣ ಹೈದರಾಬಾದಿಗೆ ಹೋಗಿದ್ದನಷ್ಟೆ. ಅಲ್ಲಿಂದ ಬಂದ ಮೇಲೆ ಮತ್ತೆ ಅವನು ಹೈದರಾಬಾದಿಗೆ ಹೋಗಿಲ್ಲ. ಕಾರಣವೇನೆಂದು ಎಷ್ಟು ಯೋಚಿಸಿದರೂ ಯಾರಿಗೂ ತಿಳಿಯುತ್ತಿಲ್ಲ. ಬೆಳಗಾಂ, ಬೆಂಗಳೂರು ಎಂದರೆ ನಿಂತ ನಿಮಿಷದಲ್ಲೇ ಹೋಗಲು ಸಿದ್ಧ. ಹೈದರಾಬಾದ್ ಎಂದರೆ 'Not for me!' ಎನ್ನುತ್ತಾನೆ. ಅವನ ತೆಳು ದೇಹ ಇನ್ನೂ ತೆಳ್ಳಗಾಗಿದೆ. ಹೀಗೇ ಮುಂದುವರಿದರೆ ಊದುಬತ್ತಿಯಷ್ಟು ದಪ್ಪವಾದರೂ ಆಗಬಹುದು ಎನ್ನುತ್ತಾರೆ — ಅವನ ನಿಕಟವರ್ತಿಗಳು.

'ಆರತಿ ಆಟೋ ಮೊಬೈಲ್ಸ್' ಭವಿತವ್ಯದ ಚಿಂತೆ ನಮ್ಮೆಲ್ಲರಿಗೆ ಆರಂಭವಾಗಿದೆ. ಅದರ ಪ್ರೊಪ್ರೈಟರೇ ಚಿಂತಾಕುಲನಾದ ಮೇಲೆ ಅವನ ಫರ್ಮಿನ ಚಿಂತೆ ನಮ್ಮೆಲ್ಲರನ್ನೂ ಕಾಡುತ್ತಿರುವುದರಲ್ಲಿ ಆಶ್ಚರ್ಯವೇನೂ ಇಲ್ಲವಷ್ಟೆ.

ಹಿನ್ನೆಲೆಯ ಸುದ್ದಿಯನ್ನು ಕೊಡುವ ಸ್ಥಿತಿಯಲ್ಲಿ ನಾನಿದ್ದೇನೆ. ಇವೆಲ್ಲಾ ಸಮಕಾಲೀನ ಘಟನೆಗಳಾದರೂ ಕಥಾನಾಯಕ ನನ್ನ ಆಪ್ತ ಮಿತ್ರನಾದುದರಿಂದ ಹರಕತ್ತೇನೂ ಇಲ್ಲ.

ಜುಲೈ ತಿಂಗಳ ಅಂತ್ಯದಲ್ಲಿ ಒಂದು ದಿನ ಮೆಸರ್ಸ್ ಕಾರ್ ಇನ್‌ಟರನ್ಯಾಷನಲ್ ಲಿ. ರವರ ಗ್ಯಾರೇಜಿನಿಂದ ಹೊಚ್ಚ ಹೊಸ ಕಾರಿನ ಡೆಲಿವರಿ ಪಡೆದ ವೀರಣ್ಣ, ಹೈದರಾಬಾದಿನ ರಾಜಮಾರ್ಗಗಳಲ್ಲಿ ನೂರಾಹತ್ತು ಮೈಲಿ ಸ್ಪೀಡನ್ನು ಹಿಟ್ಟೆ, ಹೊರವಲಯದ ಉಪನಗರವೊಂದರ ಕಾರ್ನರಿನಲ್ಲಿದ್ದ ಲಾರಿಯೊಂದರ ಮೇಲೆ ತನ್ನ ಕಾರನ್ನು ಜಂಪಿಸಿ ಸೇಫ್‌ಲ್ಯಾಂಡ್ ಮಾಡಿಸಿ ಅದೇ ಸ್ಪೀಡಿನಲ್ಲಿಯೇ ಮುಂದುವರಿದ.

ಆದರೆ ಅವನ ಹಿಂದೆ ನೂರಿಪ್ಪತ್ತು ಮೈಲಿ ಸ್ಪೀಡಿನಲ್ಲಿ ಇವನ ಕಾರನ್ನು ಓವರ್‌ಟೇಕ್ ಮಾಡಲಿತ್ತು. ವೀರಣ್ಣ ಆಕ್ಸಲರೇಟರಿನ ಮೇಲೆ ಕಾಲನ್ನು ಇನ್ನಷ್ಟು ಒತ್ತಿ ಹಿಂದಿನ ಕಾರಿಗೆ ಸೈಡ್ ಕೊಟ್ಟ. ಹಿಂದಿನ ಕಾರು ಇವನ ಸಮಕ್ಕೆ ಬಂತು. ಅದನ್ನು ಡ್ರೈವ್ ಮಾಡುತ್ತಿದ್ದವಳು ಹುಡುಗಿ.

ಅವಳು 'ರಾಜ್ ಕಪೂರ್ " ಎಂದಳು.

ವೀರಣ್ಣ ಇವಳು ತನ್ನ ಕ್ಲಾಸ್‌ಮೇಟ್ ಇರಬೇಕು ಎಂದುಕೊಂಡ, ಯಾರಿರಬೇಕು ? ಮುಂಗಿಲುಹಳ್ಳಿಯ ಮಾಲಾಸಿವ್ಹನೋ, ನರ್‍ಗೀಸೋ ಮತ್ತ್ಯಾರೋ ! ಎದೆ ಧಸಕ್ ಎಂದಿತು.

" Stop the car Raj Kapoor, you win ! " ಎಂದಳು ಪಕ್ಕದ ಕಾರಿನ ಹುಡುಗಿ.

" Your turn first, Lady, ನೀನು ಸೋತೆ ಅಂತ ಒಪ್ಗೆಂಡು ಮೊದ್ಲು ನಿಲ್ಸು, ಆಮ್ಯಾಲೆ ನೋಡ್ಕೆಂಬನಂತೆ."

ಅವಳು ಕಾರಿನ ಸ್ಪೀಡು ಕಡಿಮೆ ಮಾಡಿದಳು. ಕ್ರಮೇಣ ನಿಲ್ಲಿಸಿಯೂ ಬಿಟ್ಟಳು. ವೀರಣ್ಣನೂ ಐವತ್ತು ಗಜ ಮುಂದಕ್ಕೆ ಕಾರನ್ನೊಯ್ದು ನಿಲ್ಲಿಸಿದ.

ತನ್ನನ ನನ್ನನ ನನ್ನನನಾ...
ನಿನ್ನನ ಪಿನ್ನನ ಬುನ್ನನನಾ...
ಬಾರೇ ಕಾರಿಗೆ ಹುರಿಗಡಲೇ
ಓ ಹುರಿಗಡಲೇ

ಎಂದು ಗೊಣಗುತ್ತಿದ್ದ.

ಆ ಹುಡುಗಿ ಓಡಿಬಂದು ವೀರಣ್ಣನ ಕಾರನ್ನು ಹತ್ತಿದಳು. "Quick ! start ! drive quickly " ಎಂದಳು. ವೀರಣ್ಣ 'ರೈಟ್ಹೋ' ಎಂದ.

ಅವನ ಹೃದಯ ಬಡಿದುಕೊಳ್ಳುತ್ತಿತ್ತು.

ಅವಳ ಧ್ವನಿ ಎಲ್ಲೋ ಕೇಳಿದಂತೆ ಇದೆ, ಮುಖ ಎಲ್ಲೋ ಕಂಡಂತಿದೆ. ಪೀಯೂಸಿ ? ಅಲ್ಲ. ಫಸ್ಟ್ ಬಿಯೆಸ್ಸಿ ? ನೈ. ಸೆಕೆಂಡ್ ? No. ಫೈನಲ್ ? ಲೇದು. ಹಾಗಾದರೆ ಮತ್ತೆಲ್ಲಿ.

ಅವಳು ಗದ್ಗದ ಸ್ವರದಲ್ಲಿ ' ರಾಜ್ ! ' ಎಂದಳು. ಯಾರಿವಳು.

" ತುಂ ಮಾಸ್ಕೊಕು ಜಾಕು..." ಎಂದಳು.

" ಚುಪ್ ರಹೋ ! " ಎಂದ ರಾಜ್ ಕಪೂರ (alias ದುಂಬ್ಬೀರ್‍ಯಾ).

" Will you give me a chance in your next colour venture ? "

" ಎಲ್ಲೆ ಹಚ್ಚಿ ತಗ್ಯೇ. ನಂಗಿಂಗ್ಲೀಸ್ ಬರಲ್ಲ. ನಿಂಗೆ ಹಿಂದೀ ಬರಲ್ಲ. ಕನಡ ಬರ್‍ತ್ತೇ ? " ಎಂದ ವೀರಣ್ಣ.

" ಬರತ್ತೆ. ನಿಮಗೆ ಕನ್ನಡ ಬರುತ್ತೆ ಅಂತ ತಿಳ್ದಿರ್ಲಿಲ್ಲ. ನಿಮ್ಮ ಕನ್ನಡ ಸ್ವಲ್ಪ ಪೆಕ್ಯೂಲಿಯರ್. ನಿಮ್ಮದು ಮುಗಿಲುಹಳ್ಳಿ ಟೈಪ್ ಕನ್ನಡ. ನೀವು ಯಾವಾಗ ಕಲ್ತಿರಿ. V. K. ಮೂರ್ತಿ ಕಲ್ಸಿದರೇ. ವೈಜಯಂತಿಮಾಲಾ ಕಲ್ಸಿದ್ರೇ ? "

" ಮಾತೆಲ್ಲ ನಮ್ಮಪ್ಪ ಅಮ್ಮ ಕಲ್ಸಿದ್ರು. ಬೈಗಳ್ನೆಲ್ಲಾ ಕೊಟ್ರೇಶಿ, ಬಕ್ಕೇಶಿ... ಅದರಲ್ಲ..., ಎಂದ ವೀರಣ್ಣ. ಅಷ್ಟು ಹೊತ್ತಿಗಾಗಲೇ ಅವನ ಹೃದಯ ಢಡಬಡಿಸಲಾರಂಭಿಸಿತ್ತು.

ನಿಜವೇ ? ಸತ್ಯವೇ ? ಕನಸೇ ? ನಿಜವೇ ? !!! ನಿಜವಾಗಿದ್ದರೆ ಇದು ಛಾನ್ಸ್ ಆಫ್ ದಿ ಸೆಂಚುರಿ. ಅವಳೇ ! ಅವಳೇ ! ಮುಖವೂ ಅದೇ ! ಮಾತೂ ಅದೇ ! ಆಹ್ ! ಓಹ್ ! ಊಹ್ !!! ವೀರಣ್ಣ ಇನ್ನೇನು ಕೇಕೆ ಹೊಡೆಯಬೇಕು. ಅಷ್ಟರಲ್ಲಿ ಇರಲಿ, ಒಂದಿಷ್ಟು ಟೆಸ್ಟ್ ಮಾಡುವುದೇ ಮೇಲು ಎಂದುಕೊಂಡು.

" ಬಾರೆನ್ನ ಕಾರಿಗೆ ಹುರಿಗಡಲೇ"...ಎಂದು ಗೊಣಗಿಕೊಳ್ಳುತ್ತಾ ಕಾರ್ ಸ್ಟಾರ್ಟ್ ಮಾಡಿ ಒಂದು ಸ್ಟಡೀ ಹಂಡ್ರೆಡ್ಡಿಗೆ ತಂದು ನಿಲ್ಲಿಸಿದ.

" ಓಹ್. ನೀವು ಆ ಪಿಕ್ಚರ್ ನೋಡ್ಬಿಟ್ರಿ !! How fine ! ಹೇಗಿದೆ ನನ್ನ ಆ್ಯಕ್ಟಿಂಗ್ ? "

" Wonderfull ! ಅದೇನ್ಹೇಳ್ತಿರಿ ! ಕುರಿ...ಳು ಹಿಂದೆ ಅಂಥ ಆ್ಯಕ್ಟಿಂಗ್ ಕಂಡಿಲ್ಲ. ಮುಂದೆ ಕಾಣಲ್ಲ ! "

" But, ನಾನು ಆ್ಯಕ್ಟಿಂಗ್ ನಿಲ್ಸಿ ಬಿಡಣ ಅಂತ ಇದ್ದೇನೆ. "

" That will be a loss. ನಮ್ಮ ಜಯ್ಗ ಅದನ್ಕೇಳಿದ್ರೆ, ಅವನ್ಗೆ ಹಾರ್ಟ್ ಫೇಲಾಕ್ಕತೆ !"

" ನಿಮಗೆ ? "

" ನಾನು ಇನ್ಮ್ಯಾಲೆ ಥೇಟ್ರು ಕಡ್ಗೆ ತಲೆ ಇಟ್ಟು ಮಲಗಲ್ಲ !"

" ಹಾಗಾದ್ರೆ, ನಿಮ್ಮ ನೆಕ್ಸ್ಟ್ ಪಿಕ್ಚರಿನಲ್ಲಿ ನನ್ಗೆ ಛಾನ್ಸ್ ಕೊಡಿ ಮತ್ತೆ." ಎಂದಳು ಆ ನವಯುವತಿ. ಈ ವೇಳೆಗಾಗಲೇ ಅವಳೇ ' ಹುರಿಗಡ್ಲೆ ' ಎಂಬುದು ನಿಮಗೂ ಕೂಡ ತಿಳಿದಿರಬೇಕು. ಏಕೆಂದರೆ ವೀರಣ್ಣನಿಗೆ ಅಷ್ಟು ಹೊತ್ತಿಗೆ ಅದು ತಿಳಿದುಹೋಗಿತ್ತು.

" ನೋಡ್ರೀ ಮತ್ತೆ, ನೀವು ತಪ್ಪು ತಿಳ್ಕಂಡದಿರಿ. ನಾನು ರಾಜ್ ಕಪೂರ್ ಅಲ್ಲ ಈರಣ್ಣ "

ಹಾಗಾದ್ರೆ ಒಂದ್ಕೆಲ್ಸ. ನೀವು ಸಿನಿಮಾಕ್ಕೆ ಸೇರಿಬಿಡಿ. ನನ್ನ ನೆಕ್ಸ್ಟ್ ಪಿಕ್ಚರಿನಲ್ಲಿ ನಿಮಗೆ ಹೀರೋ ಛಾನ್ಸ್ ಕೊಡಿಸ್ತೀನಿ. ನಿಮ್ಮ ಫೇಸ್ ಕಟ್ ಇನ್ನಾರಿಗೂ

ಇಲ್ಲ. ನನಗೆ ನೀವು ರಾಜ್ ಕಪೂರ್ ಅಂತ ಅನ್ಮಾನ. ಕಾರ್ ಹಿಂದಕ್ತಿರಿಗಿಸ್ರಿ." ಎಂದಳು.

"ಅಯೋ ಬಿಡ್ರಿ ಎಂಥೆಂಥ ಅತಿರಥ ಮಹಾರಥರೇ ಇರ್ಬೇಕಾರೆ ನನ್ನಂಥ ಕಪ್ಪೆಲ್ಲಾಟನ್ನ ಯಾರು ಕೇಳ್ತರೆ."

"ನೋಡಿ, ಈ ಕನ್ನಡ ಚಿತ್ರರಂಗ ಕೆಟ್ಟು ಹೊಲಸಾಗಿದೆ. ಹಳೇ ಕತೆ, ಅಜ್ಜಿ ಕಾಲದ ಟೆಕ್ನಿಕ್, ಹೊಟ್ಟೆ ಕಿಚ್ಚು, ಕಿತ್ತಾಟ.

ಒಂದು ಒಳ್ಳೆ ಗೀತೆಯಿಲ್ಲ. ಒಂದೂ ಹೊಸ ತಂತ್ರವಿಲ್ಲ. ಇದ್ದ ಕತೇನೆಲ್ಲ ಕುಲಗೆಡ್ಸಿ 1920ರ ದಾಟಿಯಲ್ಲಿ ಪಿಕ್ಚರ್ ತೆಗೀತಾರೆ. ನನ್ನಂಥ ಹೀರೋಯಿನ್‌ಗೆ ಆ್ಯಕ್ಟಿಂಗ್ ಹೇಳಿಕೊಡೋಕೆ ಬರ್ತಾರೆ ಡೈರೆಕ್ಟರುಗಳು. ನಿಮ್ಮಷ್ಟು ಸೆನ್ಸಿಬಲ್ ಜನ ಚಿತ್ರರಂಗದಲ್ಲಿ ಇಲ್ಲವೇ ಇಲ್ಲ. Come on, ಕಂಟ್ರಾಕ್ಟ್‌ಗೆ ಸೈನ್ ಹಾಕಿ ಬಿಡಿ. ಈ ಪಿಕ್ಚರ್ನಲ್ಲಿ ಬಂದ ಹಣದಲ್ಲಿ ಮುಗಿಲು ಹಳ್ಳಿಯಲ್ಲಿ ಒಂದು ಸ್ಟುಡಿಯೋ ಕಟ್ಟಿಬಿಡೋಣ ಎಂದಳು ಹುರಿಗಡಲೆ.

ಇಷ್ಟೆಲ್ಲಾ, ನಡೆದ ಮೇಲೆ ಈರಣ್ಣ ಏನು ಮಾಡಿರಬಹುದು ಹೇಳಿ ನೋಡೋಣ !

ವೀರಣ್ಣ ಕಾರನ್ನು ಹಿಂತಿರುಗಿಸಿ ಹುರಿಗಡಲೆಯ ಕಾರಿನ ಬಳಿಗೆ ತಂದು ನಿಲ್ಲಿಸಿದ, ಹುರಿಗಡಲೆಯನ್ನು ಕೆಳಕ್ಕಿಳಿಸಿದ. ಅವಳಿಗೆ ದೀರ್ಘದಂಡ ನಮಸ್ಕಾರ ಮಾಡಿದ.

"ಮಾರಾಗಿತ್ತಿ, ನನ್ನ ಕೈ ಬಿಟ್ಬಿಡು. ನಿನ್ನ ಜೊತೆಗೆ ಬಂದೆ ಅಂದ್ರೆ ನಮ್ಮ ಕಲ್ಲೇಶಿ ಏನ್ಮಾಡ್ತನೆ ಗೊತ್ತೆ. ನನ್ನ ಚರ್ಮ ಸುಲ್ದು ಚಪ್ಲಿ ಮಾಡಿಸ್ಕೊಂತನೆ. ನನ್ನ ದೊಡ್ಮನ್ಶ ಅಂತ ನಂಬಿ ನನ್ಕೈಯಾಗೆ ಇಪ್ಪತ್ತಾವ್ರದ ಹೊಸ ಕಾರ್ ಕೊಟ್ಟದನೆ. ಕಾಯ್ತಿರ್ತರೆ. ನಮ್ಮವ್ವಗೇನಾರ ತಿಳ್ದರೆ ಮೊದ್ಲು ನಾಳಿಲ್ಲ ನಾಡ್ದೇ ಮದ್ವೆ ಮಾಡ್ಸಿ ಬಿಡ್ತಳೆ. ನಮ್ಮಣ್ಣಗೇನಾರ ತಿಳ್ದರೆ. ನಾಳೇನೆ ಅವನ ಅಂಗ್ಡಿಂಗೆ ಸೇರ್ಸಿಕೊಂಡು ಜೀರ್ಗೆ, ಮೆಂತ್ಯ ತೂಕ ಮಾಡಕ್ಹಚ್ತನೆ. ಈಗ ನಾನು ಊರಿಗ್ಹೊಂಟೆ. ಟಾಟಾ !" ಎಂದು ತನ್ನ ಕಾರು ಹತ್ತಿ ಊರಿಗೆ ಬಂದುಬಿಟ್ಟ. ಈಗ ಈರಣ್ಣ ಆ ಹಾಡನ್ನು ಹೇಳುತ್ತಲೇ ಇಲ್ಲ. ಅವನ ತೂಕ ಹತ್ತು ಪೌಂಡ್ ಕಡಮೆ ಆಗಿದೆ.

I. O. U. ಗಳನ್ನು ತಪ್ಪಿಸಬೇಕಾದರೆ
I. U. D. ಗಳನ್ನು ಬಳಸಬೇಕು.

* * * *

ಸಿಮೆಂಟ್ ಹತೋಟಿಯನ್ನು ಸಡಿಲಿಸುತ್ತಾರಂತೆ.
—ಅಂದ ಮೇಲೆ ಬೂದಿನೇ ಸಿಮೆಂಟ್ ಅಂತ ಬಹಿರಂಗವಾಗಿ ಮಾರಬಹುದು.

* * * *

ಡೊಮೆಸ್ಟಿಕ್ ಸೈನ್ಸ್ ಅಂತೆ

ಡೊಮೆಸ್ಟಿಕ್ ಸೈನ್ಸ್‌ನಲ್ಲಿ ಎಂ.ಎಸ್‌ಸಿ, ಪ್ಯಾಸು ಮಾಡಿದ್ದಳು. ಲಲಿತ. ಪ್ರಥಮ ಶ್ರೇಣಿಯಲ್ಲಿ. ಅಂದ ಮೇಲೆ ಅಡಿಗೆ ಮನೇಲಿ ಜಿರಳೆ ಇಲ್ಲದೆ ಇರುವ ಹಾಗೆ ನೋಡಿ ಕೊಳ್ಳುತ್ತಾಳೆ ಅಂತ ಭರವಸೆ ಬಂತು. ಸಂಪಿಗೆ ಕೆರೆ ಅಂಗಳದಲ್ಲಿ ಜಗಜಟ್ಟಿಗಳ ಹಣಾ ಹಣಿ ಕುಸ್ತಿಗಳಾಯಿತು ನೋಡಿ, ಆ ಎಂಟೂ ಕುಸ್ತಿಗಳಿಗೂ ನಾನು ಹಾಜರಿದ್ದೆ. ಕುಸ್ತಿ ಅಂದರೆ ನನಗೆ ಬಲು ಇಷ್ಟ. ಮಾಡುಕ್ಕಲ್ಲ, ನೋಡುಕ್ಕೆ. ಎಂಟೂ ಕುಸ್ತಿ ಗಳಿಗೆ ಲಲಿತಳೂ ಬಂದಿದ್ದಳು. ಅವಳಿಗೂ ಕುಸ್ತಿ ಅಂದರೆ ಬಲು ಇಷ್ಟ, ಮಾಡು ಕ್ಕಲ್ಲ, ನೋಡುಕ್ಕೆ ಎಂದು ಅಂದುಕೊಂಡೆ. ಲಾಲ್‌ಬಾಗಿನಲ್ಲಿ ಮಕ್ಕಳು ಚಿತ್ರ ಬಿಡಿಸುವ ಸ್ಪರ್ಧೆ ಏರ್ಪಡಿಸಿದ್ದರಲ್ಲ! ಅಲ್ಲಿಗೆ ನಾನು ಹೋಗಿದ್ದೆ. ಮಕ್ಕಳನ್ನು ಕಂಡರೆ ನನಗೆ ಪ್ರೀತಿ. ನೀವು ಈಗಾಗಲೇ ಊಹಿಸಿದಂತೆಯೇ ಲಲಿತಳೂ ಅಲ್ಲಿಗೆ ಬಂದಿದ್ದಳು. ಅವಳಿಗೂ ಮಕ್ಕಳು ಅಂದರೆ ಪ್ರೀತಿ ಇರಲೇಬೇಕು ಎಂದು ಸಹಜ ವಾಗಿ ಊಹಿಸಿದೆ. ನಮ್ಮನೆಯಿಂದ ಎಡಚೋರಿಗೆ ಹೋದರೆ ಮೂರನೆ ಮನೆಯಲ್ಲೇ ಲಲಿತ ಇರೋದು. ಹಾಗಾಗಿ ಹೋಗ್ತಾ ಬರ್‍ತಾ ಅವಳನ್ನ ಬಾಲ್ಯದಿಂದಲೂ ನೋಡಿದ್ದೆ. ಆದ್ದರಿಂದಲೇ ಅಪ್ಪ ಅಮ್ಮ ೨೮ರ ಪ್ರಾಯ ಆಗ್ತಾ ಬಂತು. ಕೈ ತುಂಬಾ ಹಣ ಸಂಪಾದಿಸ್ತಾ ಇದಿ, ಮದುವೆಮಾಡಿಕೊಳ್ಳಬಾರದೇನೋ ಎಂದು ಕೇಳಿದಾಗ, ಆಗಲಿ ಮಾತಾಪಿತೃಗಳೇ, ಆದರೆ ಮೂರನೆ ಮನೆ ಲಲಿತಳನ್ನೇ ಮದುವೆ ಯಾಗ್ತೀನಿ, ಅವಳು ಒಪ್ಪಿದರೆ. ನಮ್ಮಿಬ್ಬರದೂ ಸುಮಾರು ಸರಿಸಮನಾದ ಅಭಿರುಚಿ. ಎಂದು ಹೇಳಿದೆ.

ಅಮ್ಮ ಮೊದಲು, ಆಮೇಲೆ ಅಪ್ಪ, ಇಬ್ಬರೂ ಲಲಿತಳ ತಾಯಿ ತಂದೆಯರನ್ನು ಪುಸಲಾಯಿಸಿದರು. ಲಲಿತಳನ್ನೂ ಕೇಳಿದರು. ಲಲಿತಳೂ ಒಪ್ಪಿದಳು. ಶ್ರಾವಣ ಮಾಸದಲ್ಲೇ ಮದುವೆ ಶಾಸ್ತ್ರ ಆಯಿತು.

ಮದುವೆಗೆ ರಜ ತೆಗೆದುಕೊಂಡಿದ್ದೆ, ಮೂರು ರಾತ್ರಿ. ಅಂದರೆ ರಾತ್ರಿ ಡ್ಯೂಟಿ ಇತ್ತು ಕಾರ್ಖಾನೆಯಲ್ಲಿ. ಆಮೇಲೆ ನಾಲ್ಕನೆ ದಿನ ಕಾರ್ಖಾನೆಗೆ ಹೋದೆ. ಕಾನ್ಪುರಕ್ಕೆ ವರ್ಗ ಆಗಿದೆ, ಭಡ್ತಿ ಕೊಟ್ಟಿದೀವಿ. ಆದಷ್ಟು ಬೇಗ ಅಲ್ಲಿ ಹಾಜರಾಗು ಎಂದು ನನ್ನ ಅಧಿಕಾರಿಗಳು ಬೆನ್ನು ತಟ್ಟಿ ಹೇಳಿದರು. ಮದುವೆಯಾದ ಹೊಸದು, ಬೇರೆ ಊರಿನಲ್ಲಿ ಬೇರೆ ಸಂಸಾರ ಮಾಡಿಕೊಂಡು ಇದ್ದರೆ ಬಲು ಚೆನ್ನು. ಅಪ್ಪ ಅಮ್ಮ, ಅತ್ತೆ ಮಾವ, ಇವರ ಅಂಕೆ ಶಿಕ್ಷೆ ಇರೋದಿಲ್ಲ ಎಂದು ಅಂದುಕೊಂಡೆ. ಲಲಿತಳಿಗೂ ಹಾಗೆ ಅನ್ನಿಸಿತು. ಇಬ್ಬರೂ ಕಾನ್ಪುರಕ್ಕೆ ಹೊರಡಲು ಸಿದ್ಧಮಾಡಿಕೊಳ್ಳಲು ಶುರು ಮಾಡಿದೆವು.

ಅಮ್ಮ ಆದರದಿಂದ ಚಟ್ನಿಪುಡಿ, ಸಾಂಬಾರ್‌ಪುಡಿ, ವಾಂಗೀಭಾತ್ ಪುಡಿ ಎಲ್ಲ ವನ್ನೂ ಮಾಡಿಕೊಡ್ತೀನಪ್ಪ, ಅಲ್ಲಿ ಅವೆಲ್ಲಾ ಸಿಗುತ್ತೋ ಇಲ್ಲವೋ ಎಂದು ಹೇಳಿದಳು.

" ಬೇಡ. ಅತ್ತೆಮ್ಮ! ಡೊಮೆಸ್ಟಿಕ್ ಸೈನ್ಸ್‌ನಲ್ಲಿ ಪದವೀಧರಳು ನಾನು, ಅದನ್ನೆಲ್ಲಾ ಮಾಡಲು ನನಗೆ ಬರುತ್ತೆ" ಎಂದು ಲಲಿತ ಜಂಭ ಕೊಚ್ಚಿಕೊಂಡಳು.

ಕಾನ್ಪುರದಲ್ಲಿ ಒಂದು ಕೊರಡಿ, ಒಂದು ಹಜಾರ, ಅಡಿಗೆಮನೆ ಇದ್ದ ಮಹಡಿ ಮೇಲಿನ ಫ್ಲಾಟ್ ಒಂದು ಸಿಕ್ಕಿತು. ಅದೇ ನಮ್ಮ ಸ್ವರ್ಗ. ಒಂದು ಸಾರಿ ಅಡಿಗೆ ಮನೆಗೆ ಹೋದೆ. ನಾಲ್ಕು ಅಂತಸ್ತಿನ ಬಡುಗಳಿದ್ದ ಒಂದು ರ್‍ಯಾಕ್ ಅನ್ನು ಗೋಡೆಗೆ ಲಗತ್ತಿಸಿತ್ತು. ಆ ಬಡುಗಳ ಮೇಲೆ ಒಂದೇ ಅಳತೆಯ ಡಬ್ಬಗಳಿದ್ದುವು. ಸಾಲಾಗಿಡಲ್ಪಟ್ಟಿದ್ದುವು. ಒಂದೊಂದರ ಮೇಲೂ ಸಕ್ಕರೆ, ರವೆ, ಉಪ್ಪು, ಮೆಣಸಿನ ಪುಡಿ, ಸಾರಿನ ಪುಡಿ, ಜೀರಿಗೆ ಸಾಸುವೆ ಅಂತ ಅಚ್ಚುಮಾಡಿದ ಹಾಗೆ ಲಕ್ಷಣವಾಗಿ ಬರೆದ ಚೀಟಿ ಅಂಟಿಸಿತ್ತು. ಪಕ್ಕದಲ್ಲೇ ಎಲೆಕ್ಟ್ರಿಕ್ ಸ್ಟೌವ್ ಎರಡು ಹೊಳೆಯುತ್ತಿತ್ತು. ಅಡಿಗೆ ಮನೆ ಪಾತ್ರೆಗಳು ಹೊಳೆಯುತ್ತಿತ್ತು. "ಲೇ! ಲಲಿತ, ಡೊಮೆಸ್ಟಿಕ್ ಸೈನ್ಸ್ ಓದಿದ್ದಕ್ಕೆ ಸಾರ್ಥಕವಾಯಿತು ಕಣೆ. ಜಿರಳೆಯ ವಾಸನೆಯೇ ಇಲ್ಲವಲ್ಲೇ! ಬಲು ಜಾಣೆ ಕಣೆ." ಎಂದು ಅವಳನ್ನು ಹೊಸ ಗಂಡ ಹೊಗಳುವ ರೀತಿಯಲ್ಲಿ ಹೊಗಳಿದೆ.

ಎಂಟು ದಿವಸ ಆಗಿರಬಹುದು. ನಿಮ್ಮತ್ತೆಗೆ ಮೈ ಹುಷಾರಿಲ್ಲ ಲಲಿತನ್ನ ಎರಡು ದಿನ ಕಳಿಸು ಅಂತ ಮಾವಯ್ಯ ತಂತಿ ಕಳಿಸಿದ್ದರು. ಮಧ್ಯಾಹ್ನ ಬಂದಿದ್ದ ತಾರನ್ನು ಲಲಿತ ಒಡೆದುನೋಡಿ, ಸಂಜೆ ನಾನು ಹಿಂತಿರುಗುವ ಹೊತ್ತಿಗೆ. ಪ್ರಯಾಣಕ್ಕೆ ಸಾಮಾನು ಕಟ್ಟಿ ಸಿದ್ಧಳಾಗಿದ್ದಳು. "ನಿಮ್ಮ ಊಟಕ್ಕೆ ತೊಂದರೆ ಆಗುತ್ತೆ ಅಲ್ಲವೇ? ಏನು ಮಾಡಲಿ ಅಂದ್ರೆ, ಹೋಗದೆ ಇರುಕ್ಕೂ ಮನಸ್ಸು ಒಪ್ಪಲ್ಲ" ಎಂದಳು.

"ಏನೂ ಹೆದರಬೇಡ, ನನ್ನ ಚಿನ್ನಾ, ಅಡಿಗೆ ಮನೇ ಅಣಿ ನೋಡಿದ ಮೇಲೆ, ಅಡಿಗೆ ಸುಲಭವಾಗಿ ಮಾಡಿಕೊಳ್ಳಬಹುದು ಎಂದು ಧೈರ್ಯ ಇದೆ" ಎಂದು ಹೇಳಿ ಕಳಿಸಿದೆ.

ಮಾರನೆ ಬೆಳಿಗ್ಗೆ ಬರೀ ಕಾಫಿ ಮಾಡೋದು. ಹೋಟಲಲ್ಲಿ ಮಧ್ಯಾಹ್ನದ ಊಟ. ರಾತ್ರಿ ಅಡಿಗೆ ಮಾಡೋದು ಎಂದು ಅಂದುಕೊಂಡೆ. ಕಾಫಿ ಮಾಡೋಣ ಅಂತ ಕಾಫಿ ಪುಡಿ ಡಬ್ಬ ತೆಗೆದಿಟ್ಟೆ. ಸಕ್ಕರೆ ಡಬ್ಬ ತೆಗೆದಿಟ್ಟೆ. ನೀರು ಕುದಿಸಿ, ಕಾಫಿ ಪುಡಿ ಡಬ್ಬದ ಮುಚ್ಚಳ ತೆಗೆದೆ. ಜೀರಿಗೆ ಇತ್ತು. ಸಕ್ಕರೆ ಡಬ್ಬದ ಮುಚ್ಚಳ ತೆಗೆದೆ ಸಾಸುವೆ ಇತ್ತು,

ಅವತ್ತಿಂದ ಹೋಟಲಲ್ಲೇ ಊಟ ತಿಂಡಿ ಮುಗಿಸಲು ಏರ್ಪಾಡು ಮಾಡಿದೆ. ರಾತ್ರಿ ಮನೆಗೆ ಬಂದ ಮೇಲೆ ಆ ಡಬ್ಬಗಳ ಮೇಲಿದ್ದ ಲಕ್ಷಣವಾದ ಚೀಟಿಗಳ ಮೇಲೆ ಸಕ್ಕರೆ—ಅಲ್ಲ. ಜೀರಿಗೆ—ಅಲ್ಲ ಅಂತ ಲಕ್ಷಣವಾಗಿ ಬರೆದೆ.

ಡೊಮೆಸ್ಟಿಕ್ ಸೈನ್ಸ್ ಪ್ರವೀಣೆ—ಬಂದು ಲಲಿತ ನೋಡಲಿ.

—ಕುಮಾರ್.

ವಿದ್ಯುಚ್ಛಕ್ತಿಯ ಮಿತವ್ಯಯಕ್ಕೆ

ಹಾಗೂ

ಪ್ರಕಾಶಮಾನವಾಗಿರುವುದಕ್ಕೆ

★

ಬೆಂಗಾಲ್ ಬಲ್ಬುಗಳು

★

ಬೆಂಗಾಲ್ ಎಲೆಕ್ಟ್ರಿಕಲ್ಸ್, ಬೆಂಗಳೂರು-೩

Koravanji, September 1965

Reg. No. B.G. 343 KORAVANJI Sept. 1965

27–8–65 ರಿಂದ ಕಿಕ್ಕಿರಿದ ಜನಸಂದಣಿಗೆ ಪ್ರದರ್ಶಿಸಲ್ಪಡುತ್ತಿದೆ!


ಬೆಂಗಳೂರು

ಜೈಹಿಂದ್ – ಶಿವಾಜಿ – ಗೋಪಾಲ್

ಚನ್ನಪಟ್ಟಣ : ಮೂರ್ತಿ ಮಹಲ್
ದಾವಣಗೆರೆ : ಗೀತಾಂಜಲಿ
ಹಾಸನ : ಇಂಪೀರಿಯಲ್
ತುಮಕೂರು : ಶ್ರೀ
ಚಿತ್ರದುರ್ಗ : ಯೂನಿಯನ್
ಶಿವಮೊಗ್ಗ : ಮಲ್ಲಿಕಾರ್ಜುನ ಮಂದಿರ್
ಭದ್ರಾವತಿ : ವಿನಾಯಕ

3—9—1965 ರಿಂದ

ಮೈಸೂರು: ಪ್ರಭುದೇವ ಚಿತ್ರಮಂದಿರದಲ್ಲಿ



ಸಂಗೀತ: ಎಸ್. ಹನುಮಂತರಾವ್ ಸಾಹಿತ್ಯ: ಚಿ. ಉದಯಶಂಕರ

ನಿರ್ಮಾಪಕ-ನಿರ್ದೇಶಕ: ಬಿ. ಎಸ್. ರಂಗಾ

ಹಂಚಿಕೆ:—ವಿಕ್ರಮ್ ಪಿಕ್ಚರ್ಸ್, ಬೆಂಗಳೂರು-೯.

Edited and Published by M Shivaram
Printed by B. S. Iyengar, Bangalore-2